

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 242 | Thursday 06-06-2025 | E-mail : maruti.b.hosamani76@gmail.com | Page: 4 | Price : Rs. 1/-


## ಸಸಿ ನಾಟಿ ಸಂಕಲ್ಪ ರಸ್ತೆ ಬದಿ, ಶಾಲೆ ಕಾಲೇಜು, ಆವರಣದಲ್ಲಿ ಸಸಿ ನೆಟ್ಟು ಪೋಷಕ ಹಸರೀಕರಣಕ್ಕೆ – ಅರಣ್ಯ ಇಲಾಖೆ ಪಣ





**ಸಿಹಿ ಕಹಿ ಸುದ್ದಿ,**

**ಇಂಡಿ :** ತಾಲೂಕಿನ ನಾನಾ ಕಡೆ ಇರುವ ಸರಕಾರಿ ಜಮೀನು ಸೇರಿದಂತೆ ರಸ್ತೆ ಬದಿಯಲ್ಲಿ ಶಾಲಾ ಕಾಲೇಜುಗಳ ಆವರಣದಲ್ಲಿ ಸಸಿ ನೆಡುವ ಮೂಲಕ ಹಸರೀಕರಣ ಗೊಳಿಸಲು ಅರಣ್ಯ ಇಲಾಖೆ ಪಣ ತೊಟ್ಟಿದೆ. ಈಗಾಗಲೇ ತಾಲೂಕಿನ ಸಾವಳಸಂಗ ಗ್ರಾಮದ ಶ್ರೀ ಸಿದ್ದೇಶ್ವರ ಸ್ವಾಮೀಜಿ ವೃಕ್ಷಧಾಮ ಗ್ರಾಮದ ಅಂದಾಜು 270 ಎಕರೆ ಅದರಲ್ಲಿ 30 ಎಕರೆ ಪ್ರದೇಶದಲ್ಲಿ ಅರಣ್ಯೀಕರಣ ಅಂದಾಜು 37 ಸಾವಿರ ಸಸಿ ಕಳೆದ ಆರು ವರ್ಷಗಳಲ್ಲಿ ನೆಟ್ಟಿದ್ದಾರೆ.

ಅದಲ್ಲದೆ ಪಟ್ಟಣದ ಆಡಳಿತ ವಿಕಾಸ ಸೌಧ, ಬಸವೇಶ್ವರ ವೃತ್ತದಿಂದ ಸ್ಟೇಷನ್ ರಸ್ತೆ, ಸಿಂದಗಿ ರಸ್ತೆ, ವಿಜಯಪುರ ರಸ್ತೆ ಮತ್ತು ಅಗರಖೇಡ ರಸ್ತೆ ಎರಡು ಬದಿಗೆ ಗಿಡಗಳನ್ನು ನೆಟ್ಟು ಕಳೆದ ಆರು ವರ್ಷಗಳಿಂದ ಪೋಷಿಸುತ್ತ ನಗರದ ಸೌಂದರ್ಯ ಹೆಚ್ಚಿಸಲಾಗಿದೆ.

ಎಲ್ಲಾ ಸರಕಾರಿ ಕಚೇರಿಗಳು ಎಲ್ಲಾ ಸರಕಾರಿ ಮತ್ತು ಖಾಸಗಿ ಪದವಿ ಮತ್ತು ಪದವಿ ಪೂರ್ವ ಮಹಾ ವಿದ್ಯಾಲಯಗಳು ಪ್ರೌಢ ಶಾಲೆಗಳಲ್ಲಿ ನೆಟ್ಟ ಗಿಡಗಳನ್ನು ಆರು ವರ್ಷದಿಂದ ಪೋಷಣೆ ಮಾಡಲಾಗುತ್ತಿದೆ. ಪ್ರಸಕ್ತ ವರ್ಷ ಪಟ್ಟಣ ಹೋರ್ತಿ ವಲಯ, ದೇಗಿನಾಳ, ತಾಂಬಾ, ಬೆನಕನಹಳ್ಳಿ, ಬಾಲಗಾಂವ ಕಾತ್ರಾಳ ರಸ್ತೆ ಸೇರಿದಂತೆ ಮತ್ತಿತರ ಕಡೆ ಹತ್ತು ಸಾವಿರ ಸಸಿ ನೆಡುವ ಗುರಿ ಹೊಂದಲಾಗಿದೆ. ಸಾವಳಸಂಗದಲ್ಲಿ ಕಾರ್ಯಕ್ರಮವೂ ಇದೆ.

ರೀಯಾಯತಿದರ–ಜೂ1ರಿಂದರೈತರಿಗೆಸಸಿಗಳನ್ನುರಿಯಾಯತಿ ದರದಲ್ಲಿ ವಿತರಿಸಲಾಗುತ್ತಿದೆ. ಸಾಗವಾನಿ, ಮಹಾಗನಿ, ನಿಂಬೆ, ನೇರಳೆ, ಪೇರಲ, ಮಾವು ಕರಿಬೇವು ಸೇರಿ ನಾನಾ ಸಸಿಗಳನ್ನು ರೈತರಿಗೆ ರಿಯಾಯತಿ ದರದಲ್ಲಿ ವಿತರಿಸಲಾಗುತ್ತಿದೆ. ಸಾಮಾಜಿಕ ಅರಣ್ಯ ಸಸ್ಯ ಪಾಲನಾ ಕ್ಷೇತ್ರ ಮತ್ತು ಪ್ರಾದೇಶಿಕ ಅರಣ್ಯ ಸಸ್ಯ ಪಾಲನಾ ಕ್ಷೇತ್ರದಲ್ಲಿ ಸಸಿ ವಿತರಿಸಲಾಗುತ್ತಿದೆ.

**ಸರಕಾರಿ ಜಮೀನು ಸೇರಿ ನಾನಾ ಕಡೆ ಸಾವಿರಾರು ಸಸಿ ನೆಡಲಾಗುತ್ತಿದೆ. ಈಗಾಗಲೇ ಎಲ್ಲಾ ಸಿದ್ದತೆ ಮಾಡಿ ಕೊಂಡಿದ್ದೇವೆ. ಇಂಡಿ ತಾಲೂಕಿನಲ್ಲಿ ಅರಣ್ಯ ಬೆಳೆಸುವ ಗುರಿ ಹೊಂದಲಾಗಿದೆ.**



**। ಮಂಜುನಾಥ ಧೂಳೆ ಸಾಮಾಜಿಕ ವಲಯ ಅರಣ್ಯ ಅಧಿಕಾರಿಗಳು ಇಂಡಿ.**

**ಪರಿಸರ ರಕ್ಷಣೆ ನಮ್ಮೆಲ್ಲರ ಮಹತ್ತರ ಜವಾಬ್ದಾರಿಯಾಗಿದೆ. ಹಾಗಾಗಿ ಎಲ್ಲರೂ ಹೆಚ್ಚು ಗಿಡ ಮರಗಳನ್ನು ಬೆಳೆಸುವ ಮೂಲಕ ಪರಿಸರ ಉಳಿಸಬೇಕು.**



**। ಎಸ್.ಜಿ.ಸಂಗಾಲಕ ಪ್ರಾದೇಶಿಕ ವಲಯ ಅರಣ್ಯ ಅಧಿಕಾರಿಗಳು ಇಂಡಿ**

## ಒಳ ಮೀಸಲಾತಿ ಹಾಗೂ ಗದಗನಲ್ಲಿ ಪ್ರೊ, ಬಿ.ಕೃಷ್ಣಪ್ಪ ನವರ ಸ್ಮಾರಕ ಭವನ ನಿರ್ಮಾಣ ಮಾಡಲು ಶೀಘ್ರ ಜಾರಿಗೆ ಒತ್ತಾಯಿಸಿ–ಸಿ.ಎಂ ಸಿದ್ದರಾಮಯ್ಯರಿಗೆ ಡಿ.ಎಸ್.ಎಸ್ ಜಿಲ್ಲಾ ಸಮಿತಿಯಿಂದ ಮನವಿ

**ಸಿಹಿ ಕಹಿ ಸುದ್ದಿ,**

**ಗದಗ :** ಗದಗಿನಲ್ಲಿ ಪ್ರೊ, ಬಿ.ಕೃಷ್ಣಪ್ಪ ನವರ ಸ್ಮಾರಕ ಭವನ ನಿರ್ಮಾಣ ಮಾಡಲು ದಿನಾಂಕ 03–06–2025. ರಂದು ಮಂಗಳವಾರ ದಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸಂಸ್ಥಾಪಕರಾದ ಪ್ರೊ, ಬಿ ಕೃಷ್ಣಪ್ಪ ನವರ ಸ್ಮಾರಕ ಭವನ ನಿರ್ಮಾಣ ಹಾಗೂ ಇನ್ನಿತರ ಬೇಡಿಕೆಗಳ ಈಡೇರಿಸಲು ಗದಗ ಜಿಲ್ಲಾ ಸಂಚಾಲಕರು ದುರಗಪ್ಪ ಹರಿಜನ ಇವರಸಮ್ಮುಖದಲ್ಲಿ ಮನವಿಯನ್ನು ಕರ್ನಾಟಕ ಸರಕಾರದ ಘನ ಮುಖ್ಯಮಂತ್ರಿ ಸಿದ್ದರಾಮಯ್ಯ ನವರಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕರು ದುರಗಪ್ಪ ಹರಿಜನ ಮತ್ತು ರಾಜ್ಯಸಂಘಟನಾ ಸಂಚಾಲಕರು ಎಸ್.ಎನ್ ಬಳ್ಳಾರಿ. ಹಾಗೂ ರಾಜ್ಯ ವಿಭಾಗೀಯ ಸಂಚಾಲಕರು, ಪ್ರಕಾಶ ಹೊಸಳ್ಳಿ, ಜಿಲ್ಲಾ ಸಂಘಟನಾ ಸಂಚಾಲಕರಾದ ಹನುಮಂತ ಪೂಜಾರ, ಮುಂಡರಗಿ ತಾಲೂಕ ಸಂಚಾಲಕರು ಸೋಮಪ್ಪ



ಹೈತಾಪೂರ, ವಿದ್ಯಾರ್ಥಿ ಒಕ್ಕೂಟ ಗದಗ ಜಿಲ್ಲಾ ಸಂಚಾಲಕರು, ಕೃಷ್ಣಪ್ಪ ಪೂಜಾರ ರೋಣ ತಾಲೂಕ ಸಂಚಾಲಕರು ಸೋಮು ನಾಗರಾಜ. ಮಧು ಬಳ್ಳಾರಿ. ಹರೀಶ ಬಾವಿಮನಿ. ಮತ್ತು ಜಿಲ್ಲಾ ಸಂಚಾಲಕರು ಮತ್ತು ಪದಾಧಿಕಾರಿಗಳು, ತಾಲೂಕಾ ಸಂಚಾಲಕರು ಮತ್ತು ಪದಾಧಿಕಾರಿಗಳು ಸಮ್ಮುಖದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಿದ್ದರಾಮಯ್ಯ ನವರು ಕರ್ನಾಟಕ ಸರಕಾರ ಅವರಿಗೆ ಮನವಿ ಪತ್ರ ಕೊಡಲಾಯಿತು. ಎಸ್.ಎನ್ ಬಳ್ಳಾರಿ. ರಾಜ್ಯ ಸಂಘಟನ ಸಂಚಾಲಕರು ಪ್ರಕಾಶ ಹೊಸಳ್ಳಿ ರಾಜ್ಯ ವಿಭಾಗಿಯ ಸಂಚಾಲಕರು. ದುರಗಪ್ಪ ಎಲ್ ಹರಿಜನ ಜಿಲ್ಲಾ ಸಂಚಾಲಕರು ಸೋಮು ನಾಗರಾಜ ತಾಲೂಕು ಸಂಚಾಲಕರು ರೋಣ ಹಣಮಂತ. ಪೂಜಾರ, ಜಿಲ್ಲಾ ಸಂಘಟನ ಸಂಚಾಲಕರು, ಸೋಮಪ್ಪ ಹೈತಾಪುರು. ತಾಲೂಕು ಸಂಚಾಲಕರು ಮುಂಡರಗಿ ಕೃಷ್ಣ. ಪೂಜಾರ ಜಿಲ್ಲಾ ವಿದ್ಯಾರ್ಥಿ ಸಂಚಾಲಕರು ಗದಗ ಮದು ಬಳ್ಳಾರಿ ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ. ರೋಣ.ಗದಗ**

## ರಾಜ್ಯ ಸರಕಾರದ ವಿರುದ್ಧ ಜೆಡಿಎಸ್ ಪಕ್ಷದಿಂದ–ತೀವ್ರ ಪ್ರತಿಭಟನೆ

**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಮಾನ್ವಿ ಮತ್ತು ಸಿರವಾರ ತಾಲೂಕಿನ ಭಾಗದಲ್ಲಿ ರೈತರು ಜೋಳ ಬೆಳೆದಿದ್ದು,

ಕೂಡಲೇ ಸರಕಾರ ಹೆಚ್ಚುವರಿ ಜೋಳವನ್ನು ಖರೀದಿ ಮಾಡಬೇಕು ಎಂದು ಆಗ್ರಹಿಸಿ ಮಾನ್ವಿ ಪಟ್ಟಣದ ಬಸವ ವೃತ್ತದಲ್ಲಿ ಜೆಡಿಎಸ್ ಪಕ್ಷದಿಂದ ತೀವ್ರ ಪ್ರತಿಭಟನೆ ನಡೆಸಲಾಯಿತು.

ಮಾಜಿ ಶಾಸಕ ರಾಜಾ ವೆಂಕಟಪ್ಪನಾಯಕ ಮಾತನಾಡಿ, ಸಿಂಧನೂರು ಸೇರಿದಂತೆ ರಾಯಚೂರು ಜಿಲ್ಲೆಯ ಭಾಗದಲ್ಲಿ ರೈತರು ಜೋಳ ಬೆಳೆದಿದ್ದಾರೆ.





ಆದರೆ ಸರಕಾರ ತಿಳಿಸಿದಂತೆ ರೈತರ ಜೋಳವನ್ನು ಖರೀದಿ ಮಾಡದ ಹಿನ್ನೆಲೆಯಲ್ಲಿ ರೈತರು ಹೋರಾಟ ಮಾಡಿದ್ದಾರೆ,

ಹೀಗಾಗಿ ನಮ್ಮ ಪಕ್ಷ ರೈತಪರ ಇರುವ ಕಾರಣದಿಂದ ಹೋರಾಟ ಹಮ್ಮಿಕೊಂಡು ಸರಕಾರವನ್ನು ಖಂಡಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತರು ಬೆಳೆದ ಜೋಳವನ್ನು ಸರಕಾರ ಕೂಡಲೇ ಖರೀದಿ ಮಾಡುವ ಕೆಲಸ ಮಾಡಬೇಕು. ಒಂದು ವೇಳೆ ರೈತರು ಬೆಳೆದ ಜೋಳಕ್ಕೆ ಏನಾದರು ಅನಾಹುತವಾದರೆ ಯಾರು ಹೊಣೆ ಕೂಡಲೇ

ರೈತರ ಸ್ಥಿತಿಯನ್ನು ಅರಿತು ಖರೀದಿ ಮಾಡಬೇಕು ಎಂದು ಒತ್ತಾಯಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ. ನಕ್ಕುಂದಿ.ಮಾನ್ವಿ**

## ಪತ್ರಕರ್ತರ ಮತ್ತು ನಗರಸಭೆ ಸದಸ್ಯ ಹಾಗೂ ಕಾರ್ಮಿಕರ ಹುಟ್ಟು ಹಬ್ಬವನ್ನು ಸಂಭ್ರಮದಿಂದ ಆಚರಿಸಿದ ಗೆಳೆಯರು



**ಇಳಕಲ್ :** ನಗರದ ಹಿರಿಯ ಪತ್ರಕರ್ತ, ಹೂನ್ನನುಡಿ ಕನ್ನಡ ದಿನ ಪತ್ರಿಕೆ ಸಂಪಾದಕರು, ಕರ್ನಾಟಕ ಕಾರ್ಯನಿರತ ಮಾನ್ಯತೆ ಪಡೆದ ದಿನಪತ್ರಿಕೆಗಳ ಸಂಪಾದಕರ ಸಂಘಸಂಘದ ಜಿಲ್ಲಾಧ್ಯಕ್ಷ ಜಾಕೀರ ಹುಸೇನ ತಾಳಿಕೋಟಿ ಅವರ ಹಾಗು ನಗರಸಭೆ ಸದಸ್ಯ ಮೌಲೇಶ ಬಂಡಿವಡ್ಡರ, ಅಟೋ ಚಾಲಕ ರಫಿಕ್ ಗಡಾದ, ಬಾರ್ ಬೆಂಡಿಂಗ್ ಸಂಘದ ಸದಸ್ಯರ ಜನ್ಮ ದಿನಾಚರಣೆಯನ್ನು ಇಲ್ಲಿನ ಬಸ್ ನಿಲ್ದಾಣದಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘದ ಸಂಸ್ಥಾಪಕ ಜಿಲ್ಲಾಧ್ಯಕ್ಷ ಸಾಮಾಜಿಕ, ಉತ್ಸಾಹಿ ಯುವ ನಾಯಕ ರಿಯಾಜ್ ಮಕಾನದಾರ ಅವರು ಕೇಕ್ ಕತ್ತರಿಸುವ ಮೂಲಕ ಆಚರಿಸಿದರು. ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಜಾಕೀರ್ ಹುಸೇನ ತಾಳಿಕೋಟ ಮಾತನಾಡಿ ಗೆಳೆಯರ ಹುಟ್ಟು ಹಬ್ಬವನ್ನು ಪ್ರತಿವರ್ಷ ಕೇಕ್ ಕತ್ತರಿಸುವ ಮೂಲಕ ಸ್ನೇಹ ಸಮ್ಮಿಲನ ಹಮ್ಮಿಕೊಳ್ಳುತ್ತಿರುವದು ಶ್ಲಾಘನೀಯವಾಗಿದೆ. ಭಗವಂತ ರಿಯಾಜ್ ಮಕಾನದಾರ ಅವರಿಗೆ ಸಾಮಾಜಿಕ ರಂಗದಲ್ಲಿ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ

ಅವಕಾಶ ಕಲ್ಪಿಸಲೆಂದು ಕೋರಿದರು. ಈ ಸಂದರ್ಭದಲ್ಲಿ ಅಹಮ್ಮದಸಾಬ ಬಾಗವಾನ, ಯಲ್ಲಪ್ಪ ರಾಜಾಪುರ, ಸಿಕಂದರ್ ಹುಣಚಗಿ, ಕೆ ಎಚ್ ಸೋಲಾಪೂರ, ಸೈಯದ್ ಸಿರಾಜ್ ಖಾಜಿ, ಖಾಸೀಂ ಅಲಿ ಮಕಾನದಾರ, ಮುರ್ತುಜಾ ಬದಾಮಿ, ಅಬ್ದುಲ್ ಐನೂರ, ರಫೀಕ್ ಗಡಾದ, ದಾದಾಪೀರ ಬಾಲಚಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

**ವರದಿ:ಕೆ ಎಚ್ ಸೋಲಾಪೂರ**

## ನಮ್ಮ ಹೋರಾಟಕ್ಕೆ ಶೀಘ್ರ ಜಯ ಸಿಗಲಿದೆ ಕುಡುತಿನಿ ಭೂಸಂತ್ರಸ್ತರ ಆಶಾವಾದ

**ಬಳ್ಳಾರಿ :** ಕಳೆದ 898 ದಿನಗಳಿಂದ ಹೋರಾಟ ಮಾಡುತ್ತಿರುವ ಕುಡುತಿನಿ ಭೂ ಸಂತ್ರಸ್ತರ ಹೋರಾಟಕ್ಕೆ ಶೀಘ್ರವೇ ಜಯ ಸಿಗಲಿದೆ ಎಂದು ಕುಡುತಿನಿ ಭೂ ಸಂತ್ರಸ್ತ ಹೋರಾಟಗಾರರ ಸಂಘದ ಬಸವರಾಜ್ ಆಶಾವಾದವನ್ನು ವ್ಯಕ್ತಪಡಿಸಿದರು.

ಅವರು ಇಂದು ನಗರದ ಪತ್ರಿಕಾ ಭವನದಲ್ಲಿ ಈ ವಿಷಯದ ಕುರಿತು ಪತ್ರಿಕಾಗೋಷ್ಠಿಯನ್ನು ನಡೆಸಿ ಮಾತನಾಡಿ, ಕುಡುತಿನಿ ಸೇರಿದಂತೆ ಏಳು ಗ್ರಾಮಗಳ ಸುಮಾರು ನಾಲಕ್ಕು ಸಾವಿರಕ್ಕೂ ಅಧಿಕ ಕುಟುಂಬಗಳ 12500 ಎಕರೆ ಜಮೀನನ್ನು ಕೆಐಡಿಬಿ 2010 ರಲ್ಲಿ ವಶಪಡಿಸಿಕೊಂಡಿದ್ದು ಆ ದಿನ ಭೂ ಮಾಲೀಕರಿಗೆ ಸರಿಯಾದ ಬೆಲೆಯನ್ನು ನಿಗದಿಪಡಿಸಿರುವದಿಲ್ಲ ನಮ್ಮ ಹೋರಾಟ ಮತ್ತು ನ್ಯಾಯಾಲಯದ ಆದೇಶದ ಪ್ರಕಾರ ಎಕರೆಗೆ ಒಂದು ಕೋಟಿ ಒಂದು ಲಕ್ಷ ರೂಪಾಯಿಗಳ ಪರಿಹಾರ ಹಣವನ್ನು ನೀಡಬೇಕಾಗಿದೆ ಆದಷ್ಟು ಶೀಘ್ರದಲ್ಲಿ ನಮಗೆ ಈ ಭೂಬೆಲೆ ಸಿಗಲಿದೆ ಎಂದು ಅವರು ತಿಳಿಸಿದರು.

ನಮ್ಮಹೋರಾಟಕ್ಕೆಬೆಲೆಕೊಟ್ಟುಜಿಲ್ಲೆಯಸಂಸದರುಮತ್ತು ಸಂಡೂರು ತಾಲೂಕಿನ ಶಾಸಕರು ಸರ್ಕಾರದೊಂದಿಗೆ ಮಾತುಕತೆ ನಡೆಸುವ ಮಧ್ಯಸ್ಥಿಕೆಯನ್ನು ವಹಿಸಿ ನಮ್ಮ ಸಮಸ್ಯೆಯನ್ನು ಪರಿಹರಿಸುವುದಾಗಿ ತಿಳಿಸಿದ್ದಾರೆ ಅವರು ಮೇ 25 ರ ಒಳಗೆ ಈ ಸಮಸ್ಯೆಯನ್ನು ಇತ್ಯರ್ಥ ಪಡಿಸಬೇಕಾಗಿತ್ತು, ಆದರೆ ಇಲ್ಲಿಯವರಿಗೆ ಅವರು ಈ ವಿಷಯದ ಕುರಿತು ಮಾತನಾಡಿರುವುದಿಲ್ಲ ಕೂಡಲೇ ಸಂಡೂರಿನ ಶಾಸಕರು ಮತ್ತು ಜಿಲ್ಲೆಯ ಸಂಸದರು ಸರ್ಕಾರದೊಂದಿಗೆ ಮಾತನಾಡಿ ನಮ್ಮ ನ್ಯಾಯಯುತವಾದ ಭೂ ಬೆಲೆಯನ್ನು ಕೊಡಿಸಲು ಪ್ರಯತ್ನಿಸಬೇಕೆಂದು ಅವರು ಈ ಸಂದರ್ಭದಲ್ಲಿ ಒತ್ತಾಯಿಸಿದರು.

ಈ ಪತ್ರಿಕಾಗೋಷ್ಠಿಯಲ್ಲಿ ಸತ್ಯ ಬಾಬು ಸಂಪತ್ ಕುಮಾರ್ ಜಗ್ಲಿ ಸಾಬ್ ಗೋಪಿ ತಿಪ್ಪೇಸ್ವಾಮಿ ಸೇರಿದಂತೆ ಹಲವು ಮಹಿಳೆಯ ರೈತರು ಸಹ ಇದ್ದರು.

## ಬದುಕಲು ಕಲಿಸುವದೇ ವಿದ್ಯಾರ್ಥಿ ಜೀವನ: ಸಂಗಮೇಶ ಬಬಲೇಶ್ವರ

**ವಿಜಯಪುರ :** ಶಿಕ್ಷಣದಿಂದ ಸಿಗುವ ಜ್ಞಾನಾರ್ಜನೆಯು ಪ್ರತಿಯೊಬ್ಬರ ಆಸ್ತಿ. ವಿದ್ಯಾರ್ಥಿ ಬದುಕೆಂಬುದು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವ ಕ್ರಿಯಾಶೀಲ ಅವಧಿ. ಇದು ಮಕ್ಕಳ ಮೌಲ್ಯಾತ್ಮಕ ವ್ಯಕ್ತಿತ್ವ ರೂಪಿಸುವ ಕಾಲಘಟ್ಟವಾಗಿದೆ ಎಂದು ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಹೇಳಿದರು.

ಸೋಮವಾರ ನಗರದ ಕಾಳಿಕಾ ಮಂದಿರದಲ್ಲಿ

ಉನ್ನತಿ ವಿದ್ಯಾವರ್ಧಕ ಸಂಘದ ವತಿಯಿಂದ ಉನ್ನತಿ ಕೋಚಿಂಗ್ ಕ್ಲಾಸಿನ ಸಮಾರೋಪ ಹಾಗೂ ನಿರಂತರ ತರಬೇತಿಯ ಪ್ರಾರಂಭೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣದ ಜತೆಗೆ ಒಳ್ಳೆಯ ಸಂಸ್ಕಾರ ನೀಡುವುದು ತಂದೆ–ತಾಯಿಗಳ ಮುಖ್ಯ ಆದ್ಯತೆಯಾಗಬೇಕು ಎಂದು ಹೇಳಿದರು.

ಶಿಕ್ಷಕ ಸಾಹಿತಿ ಸಂತೋಷ ಬಂಡೆ ಮಾತನಾಡಿ, ಮಕ್ಕಳು



ಶ್ರಮವಹಿಸಿ ಅಧ್ಯಯನ ಮಾಡುವ ಪ್ರವೃತ್ತಿಯನ್ನು ರೂಢಿಸಿಕೊಳ್ಳುವ ಜೊತೆಗೆ ಸ್ವಾವಲಂಬಿ ಬದುಕಿಗೆ ಅಗತ್ಯವಾದ ಮಾನವೀಯ ಮೌಲ್ಯ ಮತ್ತು ಜೀವನ ಕೌಶಲ್ಯ ಬೆಳೆಸಿಕೊಂಡು ದೇಶದ ಉತ್ತಮ ಪ್ರಜೆಗಳಾಗಬೇಕು ಎಂದು ಹೇಳಿದರು.

ಶಿಕ್ಷಕ ಸಾಹಿತಿ ಆರ್.ಎಸ್. ಪಟ್ಟಣಶೆಟ್ಟಿ ಮಾತನಾಡಿ, ಮಕ್ಕಳಿಗೆ ಆಚಾರ, ವಿಚಾರ ಕಲಿಸಿ ಉತ್ತಮ ಸಂಸ್ಕಾರ ನೀಡುವ ಜತೆಗೆ ಅಕ್ಷರಾಭ್ಯಾಸ ಮಾಡಲು ಮನೆಯಲ್ಲಿ ಉತ್ತಮ ವಾತಾವರಣ ಕಲ್ಪಿಸಬೇಕು. ಪಾಲಕರ ಪ್ರೀತಿ, ಗುರುವೃಂದದ ಮಾರ್ಗದರ್ಶನ, ವಿದ್ಯಾರ್ಥಿಗಳ ನಿರಂತರ ಪರಿಶ್ರಮದಿಂದ ಖಂಡಿತ ಗುರಿ ತಲುಪಲು ಸಾಧ್ಯ ಎಂದು ಹೇಳಿದರು.

ವ್ಯವಸ್ಥಾಪಕ ನಿರ್ದೇಶಕ ಸುನೀಲಕುಮಾರ ಅತನೂರ

ಮಾತನಾಡಿ, ತಾಯಂದಿರು ತಮ್ಮ ಮಕ್ಕಳಿಗೆ ಸಾಮರಸ್ಯ, ಸ್ನೇಹ, ಹೊಂದಾಣಿಕೆ, ಪ್ರಾಮಾಣಿಕತೆಯನ್ನು ಚಿಕ್ಕಂದಿನಿಂದಲೇ ಕಲಿಸಬೇಕು ಎಂದರು.

ಉನ್ನತಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಸಂಗಣ್ಣ ಅತನೂರ ಅಧ್ಯಕ್ಷತೆ ವಹಿಸಿದ್ದರು. ಇಂಡಿ ಯುವ ಧುರೀಣ ಮಂಜುನಾಥ ಕಾಮಗೊಂಡ ಸರಸ್ವತಿ ಫೊ?ಟೋ ಪೂಜೆ ಸಲ್ಲಿಸಿ ಮಾತನಾಡಿದರು. ಹೆಸ್ಕಾಂ ನಿವೃತ್ತ ಹಿರಿಯ ಅಭಿಯಂತರರಾದ ಪುರುಷೋತ್ತಮ ಗಲಗಲಿ ಸಸಿಗೆ ನಿರೂಪಿಸಿದರು.

ಈರಯ್ಯ ಮಠಪತಿ ಸಾನಿಧ್ಯ ವಹಿಸಿದ್ದರು. ಕೋಚಿಂಗ್ ಕ್ಲಾಸಿಸ್ ಮಾರ್ಗದರ್ಶಕರಾದ ಪ್ರಕಾಶ ಬೇನೂರ, ಶಿಕ್ಷಕ ಷಣ್ಮುಖ ಕಲಶೆಟ್ಟಿ, ಶಿಕ್ಷಣ ಪ್ರೇಮಿಗಳಾದ ರಾಜುಗೌಡ, ಗುರಪ್ಪ ಅವಟಿ, ಸುರೇಶ ಕೌಲಗಿ, ಸಂಸ್ಥಾಪಕ ಕಾರ್ಯದರ್ಶಿ ಮಲ್ಲಿಕಾರ್ಜುನ ಅತನೂರ, ಉಪಾಧ್ಯಕ್ಷ ಮಹೇಶ ಬೇನೂರ, ಓಂಕಾರ ನಾವಿ ಬಸವರಾಜ ಲಾಳಸಂಗಿ ಸೇರಿದಂತೆ ಶಿಕ್ಷಕರು, ಮಕ್ಕಳು, ಪಾಲಕರು, ತಾಯಂದಿರು ಭಾಗವಹಿಸಿದ್ದರು.

## ಸೈನಿಕರಿಗೆ ಆತ್ಮಸ್ಥೈರ್ಯ ತುಂಬುವ ತಿರಂಗ ಯಾತ್ರೆ

**ಗುಳೇದಗುಡ್ಡ :** ದೇಶದ ಸಂಕೇತವಾಗಿರುವ ತ್ಯಾಗ, ಬಲಿದಾನ ಮತ್ತು ಸಾಹಸದ ಪ್ರತೀಕವಾಗಿರುವ ತಿರಂಗವನ್ನು ಹಿಡಿದು ಪಟ್ಟಣದ ಎಲ್ಲ ವರ್ಗದ, ಎಲ್ಲ ಧರ್ಮಗಳ ಜನರು ಆಚರಿಸಿದ್ದು ಖುಷಿ ತರುತ್ತದೆ. ನಮಗೆ ಜನ್ಮ ಕೊಟ್ಟ ತಾಯಿ ಮತ್ತು ಜನ್ಮ ಕೊಟ್ಟ ಭೂಮಿ ಸ್ವರ್ಗಕ್ಕಿಂತಲೂ ಶ್ರೇಷ್ಠವಾದದ್ದು. ಅದರೆ ಸದ್ಯದ ಪರಿಸ್ಥಿತಿಯಲ್ಲಿ ದೇಶವನ್ನು ಕಾಯುವಂತಹ ಸೈನಿಕರ ತ್ಯಾಗ, ಬಲಿದಾನ ಅತ್ಯಂತಮಹತ್ವಪೂರ್ಣವಾಗಿರುವಂತಹದ್ದು ಎಂದು ಪಟ್ಟಣದ ಗುರುಸಿದ್ದೇಶ್ವರ ಮಠದ ಬಸವರಾಜ ಶ್ರೀಗಳು ಹೇಳಿದರು.

ಅವರು ಪಟ್ಟಣದಲ್ಲಿ ನಗರ ಸುಧಾರಣಾ ಸಮಿತಿ ವತಿಯಿಂದ ಜರುಗಿದ ತಿರಂಗಾ ಯಾತ್ರೆಯ ಸಮಾರಂಭದಲ್ಲಿ ಮಾತನಾಡಿ, ಈ ದೇಶದ ಸಂರಕ್ಷಣೆಗಾಗಿ ಜಾತಿ, ಮತ, ಧರ್ಮ, ಪಕ್ಷ, ಪಂಗಡ, ಇವೆಲ್ಲವೂಗಳನ್ನು ಹೊರತುಪಡಿಸಿ ನಾವೆಲ್ಲರೂ ಭಾರತ ಮಾತೆಯ ಮಕ್ಕಳು, ದೇಶಕ್ಕಾಗಿ ಏನೆಲ್ಲ



ತ್ಯಾಗ ಮಾಡಲು ಸಿದ್ಧರಿದ್ದಿವಿ ಎಂದು ಪ್ರತಿಜ್ಞೆ ಮಾಡಬೇಕಾದ ತಿರಂಗಾ ಯಾತ್ರೆ ಇದಾಗಿದೆ. ನಮ್ಮ ಸೈನಿಕರಿಗೆ ಆತ್ಮಸ್ಥೈರ್ಯ ತುಂಬುವ ಯಾತ್ರೆ ಇದಾಗಿದೆ ಎಂದರು.

ಮಾಜಿ ಶಾಸಕ ರಾಜಶೇಖರ ಶೀಲವಂತ ಮಾತನಾಡಿ, ದೇಶದ ಮಹಿಳೆಯರ ಸಿಂಧೂರದ ತಂಟೆಗೆ ಬಂದರೇ ಏನಾಗುತ್ತದೆ ಎಂಬುದನ್ನು ಆಪರೇಶನ್ ಸಿಂಧೂರ ಮೂಲಕ ಪಾಕಿಸ್ತಾನವಷ್ಟೇ ಅಲ್ಲದೇ ಇಡೀ ಜಗತ್ತಿಗೆ ತೋರಿಸಿದ್ದಾರೆ. ಸೈನಿಕರ ಸೇವೆ ನಿಜಕ್ಕೂ ಸ್ಮರಣೀಯವಾದುದು ಎಂದು ಹೇಳಿದರು.

ಸಿಂದೂರ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ತಾಲೂಕಿನ ಯೋಧ ಬಸವರಾಜ ಸುಂಕದ ಸನ್ಮಾನ ಸ್ವೀಕರಿಸಿ ಮಾತನಾಡಿ, ನನಗೂ ಮತ್ತು ಸಹೋದರ ಹನಮಂತ ಇವರಿಗೆ ಸನ್ಮಾನಿಸಿದ್ದು ನಮಗೆ ಖುಷಿ ನೀಡುತ್ತದೆ.

ಆಪರೇಷನ್ ಸಿಂದೂರದಲ್ಲಿ ನಾವಿಬ್ಬರೇ ಭಾಗವಹಿಸಿಲ್ಲ. ಅದೆಷ್ಟೋ ಸಾವಿರಾರು ಸೈನಿಕರೂ ಭಾಗವಹಿಸಿದ್ದಾರೆ. ಎಷ್ಟೋ ಯೋಧರು ತಮ್ಮ ಅಂಗಾಂಗ ಕಳೆದುಕೊಂಡಿದ್ದಾರೆ. ನನಗೂ ಆಪರೇಷನ್ ದಲ್ಲಿ ಒಂದು ಏಟಾಗಿದೆ. ತಮ್ಮ ಸನ್ಮಾನ, ಗೌರವ ನೋಡಿದರೆ ಇನ್ನುಮುಂದೆ ದೇಶಕ್ಕಾಗಿ ಇಂತಹ ಹತ್ತಾರು ಏಟು ಬಿದ್ದರೂ ಸಹಿಸಿಕೊಳ್ಳುತ್ತೇನೆ. ಇಂತಹ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ನನಗೆ ಸಿಕ್ಕಿದೆ ನಾನೇ ಪುಣ್ಯವಂತ ಎಂದರು.

ನಗರ ಸುಧಾರಣಾ ಸಮಿತಿ ಅಧ್ಯಕ್ಷ ರಂಗಪ್ಪ ಶೇಬಿನಕಟ್ಟಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಮತಗಿ–ಕೋಟೆಕಲ್ ಹೊಳೆಹುಚ್ಚೇಶ್ವರ ಶ್ರೀಗಳು, ಡಾ.ನೀಲಕಂಠ ಶ್ರೀಗಳು, ಮುರಘಾಮಠದ ಕಾಶೀನಾಥ ಶ್ರೀಗಳು, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಸೇರಿದಂತೆ, ಪಟ್ಟಣದ ವೈದ್ಯರು, ವಕೀಲರು, ವಿದ್ಯಾರ್ಥಿಗಳು, ಗಣ್ಯರು, ಸಾರ್ವಜನಿಕರು, ಸಂಘ– ಸಂಸ್ಥೆಗಳ ಪದಾಧಿಕಾರಿಗಳು, ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗುರುಗಳು, ಭಾಗವಹಿಸಿದ್ದರು.

## ನದಿ ತೀರದ ಗ್ರಾಮಸ್ಥರು ಎಚ್ಚರಿಕೆ ವಹಿಸಬೇಕು: ಸಚಿವ ತಿಮ್ಮಾಪೂರ

**ಜಮಖಂಡಿ :** ತಾಲೂಕಿನ ಅಂದಾಜು 519.60 ಟಿಎಂಸಿ ನೀರು ಸಂಗ್ರಹದ ಸಾಮರ್ಥ್ಯ ಹೊಂದಿರುವ ಹಿಪ್ಪರಗಿ ಜಲಾಶಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಭೇಟಿ ನೀಡಿ ಜಲಾಶಯದಲ್ಲಿ ನೀರು ಸಂಗ್ರಹದ ಪರಿಸ್ಥಿತಿ ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ತಾಲೂಕಿನ ಕೃಷ್ಣಾ ನದಿಯಲ್ಲಿ ಒಳ ಹರಿವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ನದಿಯಲ್ಲಿ ಮತ್ತಷ್ಟು ನೀರು ಏರಿಕೆಯಾಗುವ ಸಾಧ್ಯತೆಯಿದೆ. ಸಧ್ಯ ಪ್ರವಾಹದ ಬಗ್ಗೆ ಯಾವುದೇ ಭೀತಿಯಿಲ್ಲ. ನದಿ ತೀರಕ್ಕೆ ಯಾರೂ ಹೋಗಬಾರದು. ಸಂದರ್ಭದಲ್ಲಿ ಮಳೆಯಿಂದ ಮತ್ತು ಕೊಯ್ನಾ ಜಲಾಶಯದಿಂದ ನೀರಿನ ಹರಿವು ಹೆಚ್ಚಾಗುವ ಸಂಭವವಿದ್ದು ನದಿ ತೀರದ ಗ್ರಾಮಸ್ಥರು ಬಹಳಷ್ಟು ಎಚ್ಚರಿಕೆ ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಆನಂದ ನ್ಯಾಮಗೌಡ, ಜಿಲ್ಲಾಧಿಕಾರಿ ಕೆ. ಎಂ. ಜಾನಕಿ, ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ, ಡಿವೈಎಸ್ಪಿ ರೋಷನ ಜಮೀರ, ತಹಸೀಲ್ದಾರ ಸದಾಶಿವ ಮಕ್ಕೊಜಿ, ಕಾಂಗ್ರೆಸ್ ಮುಖಂಡರಾದ ತೌಫೀಕ ಪಾರ್ಥನಳ್ಳಿ, ಮಲ್ಲಪ್ಪ ಚಾಮೋಜಿ, ಅಬೂಬಕರ್ ಕುಡಚಿ ಸಹಿತ ಹಲವರು ಹಾಜರಿದ್ದರು.

# ಬಿಜೆಪಿಗರಿಗೆ ಅಧಿಕಾರದ ಹುಚ್ಚು ಹಿಡಿದಿದೆ: ಗೊಂಡಬಾಳ ಬೇಸರ

**ಕೊಪ್ಪಳ :** ಬಿಜೆಪಿ ನಾಯಕರಿಗೆ ಪಾಕಿಸ್ತಾನದ ಹೆಸರು ಹೇಳದಿದ್ದರೆ ಬದುಕೇ ನಡೆಯಲ್ಲ, ಕಲಬುರಗಿಯ ಜಿಲ್ಲಾಧಿಕಾರಿಗಳ ಬಗೆಗಿನ ಬಿಜೆಪಿಯ ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಹೇಳಿಕೆ ಅತ್ಯಂತ ಖಂಡನೀಯ ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯೆ ಜ್ಯೋತಿ ಎಂ. ಗೊಂಡಬಾಳ ಹೇಳಿಕೆ ನೀಡಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಪಾಕಿಸ್ತಾನ ಪ್ರೇಮಿ ಬಿಜೆಪಿಗರು ಇಷ್ಟು ದಿನ ರಾಜ-ಕೀಯ ನಾಯಕರ ವಿರುದ್ಧ ಪಾಕಿಸ್ತಾನದ ಹೆಸರು ಪ್ರಯೋಗಿಸುತ್ತಿದ್ದರು, ಈಗ ಅವರ ನಾಲಿಗೆ ಇನ್ನೂ ಉದ್ದವಾಗಿ ಅಧಿಕಾರಿಗಳನ್ನೂ ಪಾಕಿಸ್ತಾನದಿಂದ ಬಂದವರು ಎನ್ನುವ ಮಟ್ಟಿಗೆ ಬಂದಿದೆ, ಇದು ನಿಜಕ್ಕೂ ಕೆಟ್ಟ ಪರಿಣಾಮ ಬೀರುವ ಕ್ರಿಯೆ ಹಾಗೇ ಬಿಜೆಪಿಗರು ಸೇನಾಧಿಕಾರಿಗೆ ಭಯೋತ್ಪಾದಕರ ಸಹೋದರಿ ಎಂದರು, ಸೈನಿಕರು ಮೋದಿಯ ಕಾಲಿಗೆ ಬೀಳುತ್ತಾರೆ ಎಂದರು, ಸೈನಿಕರ ಪತ್ನಿಯರ ಶೀಲದ ಬಗ್ಗೆ ಸಂಶಯದಿಂದ ಮಾತನಾಡಿದರು ಈಗ ಇಲ್ಲಿ ಜಿಲ್ಲಾಧಿಕಾರಿ ಪಾಕಿಸ್ತಾನದಿಂದ ಬಂದವರು ಎಂದರು. ಬಿಜೆಪಿಗರ ಜ್ಞಾನವು ಪಾಕಿಸ್ತಾನ, ಮುಸ್ಲಿಂ ವಿಚಾರಗಳನ್ನು ದಾಟಿ ಮುಂದೆ ಹೋಗುವುದೇ ಇಲ್ಲ, ಅದಕ್ಕೆ ಕಾರಣ ಅಧಿಕಾರದ ದಾಹ, ಮೋಹ, ಹಣದ ವ್ಯಾಮೋಹ ಎಂಬುದು ಸ್ಪಷ್ಟವಾಗಿದ್ದು, ದೇಶದ ಜನರು ಈಗಲಾದರು ಬಿಜೆಪಿಯ ಮನುವ್ಯಾದಿತನಕ್ಕೆ ಉತ್ತರ ಕೊಡಬೇಕಿದೆ.

ಅಧಿಕಾರಿಗಳ ನೈತಿಕ ಸ್ಥೈರ್ಯ ಕಸಿಯುವ ಪ್ರಯತ್ನದಲ್ಲಿರುವ ರವಿಕುಮಾರ್ ಅವರಿಗೆ ಕಲಬುರಗಿಯ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಐಎಎಸ್ ಪಾಸ್ ಮಾಡಿ ದೇಶ ಸೇವೆಗೆ, ಜನಸೇವೆಗೆ ಬಂದವರು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅತ್ಯುತ್ತಮ ಚುನಾವಣಾ ಅಧಿಕಾರಿಯ ಪ್ರಶಸ್ತಿಯನ್ನು ಕೊಡಮಾಡಿದ್ದಾರೆ. ನಿಮ್ಮ ಹಾಗೆ ಯಾ-ರಿಗೋ ಬಹುಪರಾಕ್ ಹೇಳಿಕೊಂಡು, ಬಿಜೆಪಿಗರ ಗುಲಾಮಗಿರಿ ಮಾಡಿಕೊಂಡು ಸ್ಥಾನ ಗಿಟ್ಟಿಸಿಕೊಂಡವರಲ್ಲ, ಅಧಿಕಾರಿಯ ಧರ್ಮ ಯಾವುದಾದರೂ ಅವರುಸಂವಿಧಾನದಮೇಲೆಪ್ರಮಾಣಮಾಡಿ ಜನಸೇವೆಗೆ ಬಂದಿರುತ್ತಾರೆ, ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಯಾರಿಗೆ ಹೇಗೆ ಮಾತಾಡಬೇಕು ಎಂಬ ಮಿನಿಮಮ್ ಕಾಮನ್ ಸೆನ್ಸ್ ಇಲ್ಲದ ಇಂತವರು ಕರ್ನಾಟಕದ ರಾಜಕಾರಣಕ್ಕೆ ಕಳಂಕ ಎಂದು ಜರಿದಿದ್ದಾರೆ.

ದೇಶಕ್ಕಾಗಿ ದುಡಿಯುವ ಸೇನಾಧಿಕಾರಿ, ಅಧಿಕಾರಿಗಳು, ಸೈನಿಕರನ್ನು ಅವಮಾನಿಸುವುದನ್ನು ವ್ಯಸನ ಮಾಡಿಕೊಂಡಿರುವ ಬಿಜೆಪಿಗರ ದುರಹಂಕಾರಕ್ಕೆ ಜನತೆ ಪಾಠ ಕಲಿಸಬೇಕಿದೆ, ಬಿಜೆಪಿ ರಾಜ್ಯದಲ್ಲಿ ಅಧಿಕಾರ ಕಳೆದುಕೊಂಡು ಸಮಸ್ಯೆಯಲ್ಲಿದ್ದಾರೆ, ಅದಕ್ಕೆ ಜನರಿಗೆ ತಪ್ಪು ಸಂದೇಶಗಳ ಮೂಲಕ ತೊಂದರೆ ಕೊಡುತ್ತಿದ್ದಾರೆ ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯೆ ಜ್ಯೋತಿ ಎಂ. ಗೊಂಡಬಾಳ ತಿಳಿಸಿದ್ದಾರೆ.

# ಇ-ಖಾತಾ ಅಭಿಯಾನದ ಅವಧಿ ವಿಸ್ತರಣೆ

**ಕೊಪ್ಪಳ :** ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಸ್ತಿಗಳಿಗೆ ಇ-ಖಾತಾ ನೀಡುವ ಅಭಿಯಾನದ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಕುಷ್ಟಗಿ ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇ-ಖಾತಾ ನೀಡಲು ಮೇ 10 ರವರೆಗೆ ಅಭಿಯಾನ ನಡೆಸಲಾಗಿದ್ದು, ಈ ದಿನಾಂಕದವರೆಗೆ ನಿರೀಕ್ಷಿತ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗದ ಕಾರಣ ಮತ್ತು ಇ-ಖಾತಾ ನೀಡಲು ಬಾಕಿಯಿರುವದರಿಂದ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಸ್ತಿಗಳಿಗೆ ಇ-ಖಾತಾ ನೀಡುವ ಅಭಿಯಾನದ ಅವಧಿಯನ್ನು ಆಗಸ್ಟ್ 10ರವರೆಗೆ ವಿಸ್ತರಿಸಿ

ಅನುಮೊದನೆ ನೀಡಿದ್ದಾರೆ. ಕುಷ್ಟಗಿ ಪಟ್ಟಣದ ಸಾರ್ವಜನಿಕರು ಈ ಅಭಿಯಾನದ ಸದುಪಯೋಗ ಪಡೆದುಕೊಳ್ಳುವಂತೆ ಕುಷ್ಟಗಿ ಪುರಸಭೆ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ವಿವಿಧ ತೋಟಗಾರಿಕೆ ಯೋಜನೆಗಳಡಿ ಸಹಾಯಧನ: ಅರ್ಜಿ ಆಹ್ವಾನ

**ಕೊಪ್ಪಳ :** ತೋಟಗಾರಿಕೆ ಇಲಾಖೆ ವತಿಯಿಂದ 2025-26ನೇ ಸಾಲಿನ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳಡಿ ಸಹಾಯಧನಕ್ಕಾಗಿ ಆಸಕ್ತ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ತೋಟಗಾರಿಕೆ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ, ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ತಾಳೆಬೆಳೆ, ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ, ಮಹಾತ್ಮಗಾಂದಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಗಳಡಿ ತೋಟಗಾರಿಕೆ ಬೆಳೆಗಳ ಹೊಸ ಪ್ರದೇಶ ವಿಸ್ತರಣೆ, (ಗೇರು, ಪೇರಲ, ಮಾವು, ಬಾಳೆ,

ದಾಳಿಂಬೆ, ಪಪ್ಪಾಯ, ಇತರೆ) ರೋಗ ಮತ್ತು ಕೀಟ ನಿಯಂತ್ರಣ, ನೀರು ಸಂಗ್ರಹಣಾ ಘಟಕ, ಕೊಯ್ಲೋತ್ತರ ನಿರ್ವಹಣೆ ಘಟಕಗಳಿಗೆ, ಸಂರಕ್ಷಿತ ಬೇಸಾಯ ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಯಾಂತ್ರೀಕರಣ ಹಾಗೂ ವಿವಿಧ ಘಟಕಗಳಿಗೆ ಸಹಾಯಧನ ನೀಡಲಾಗುತ್ತಿದೆ.

ಕೇಂದ್ರ ವಲಯ, ರಾಜ್ಯವಲಯ ಮತ್ತು ಜಿಲ್ಲಾ ವಲಯ ಯೋಜನೆಗಳ ಸಹಾಯಧನ ಪಡೆಯಲು ಆಸಕ್ತ ರೈತರು ಜೂನ್ 20 ರೊಳಗಾಗಿ ಅರ್ಜಿ ಸಮೇತ ಅಗತ್ಯವಾದ ದಾಖಲಾತಿಗಳನ್ನು ಸಂಬಂಧಪಟ್ಟ ಆಯಾ ತಾಲ್ಲೂಕಾ ತೋಟಗಾರಿಕಾ ಕಛೇರಿಯಲ್ಲಿ ಸಲ್ಲಿಸಬೇಕು. ಸರ್ಕಾರ ನಿಗದಿಪಡಿಸಿದ ಮಾರ್ಗಸೂಚಿ ಹಾಗೂ ಲಭ್ಯವಿರುವ ಅನುದಾನದ ಮೇರೆಗೆ ಜೇಷ್ಟತಾವಾರು ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಕೊಪ್ಪಳ ಮೊ.ಸಂ: 9448511649, ಗಂಗಾವತಿ ಮೊ: 8861697989, ಕುಷ್ಟಗಿ ಮೊ.ಸಂ: 9611888607, ಯಲಬುರ್ಗಾ ಮೊ.ಸಂ: 9945644338 ಹಾಗೂ ತೋಟಗಾ-ರಿಕೆ ಉಪನಿರ್ದೇಶಕರ ಕಛೇರಿಯ ಕೇಂದ್ರ ಸ್ಥಾನಿಕ ಸಹಾಯಕರ ಮೊ.ಸಂ: 9741057047 ಗೆ ಸಂಪರ್ಕಿಸಬಹುದು ಎಂದು ತೋಟಗಾರಿಕಾ ಇಲಾಖಾ ಪ್ರಕಟಣೆ ತಿಳಿಸಿದೆ.

# ಬಲ್ಡೋಟಾ ಕಾರ್ಖಾನೆ ಒದ್ದೋಡಿಸಲು ಜನರನ್ನು ಸಜ್ಜುಗೊಳಿಸೋಣ

**ಶೀಘ್ರ ನಿರಂತರ ಧರಣಿ ಸತ್ಯಾಗ್ರಹ | ಒಂದು ಲಕ್ಷ ಪತ್ರ ಚಳುವಳಿ | ಪರಿಸರ ಜಾಗೃತಿಗೆ ವಿವಿಧ ಸ್ಪರ್ಧೆ | ಪ್ರತಿ ವಾರ್ಡ್‌ಲ್ಲಿ ಪರಿಸರ ಜಾಗೃತಿ ಸಭೆ**

**ಕೊಪ್ಪಳ :** ನಗರದ ಪಕ್ಕದಲ್ಲಿಯೇ ಬಂದು ಬಲ್ಡೋಟಾ ಕಾರ್ಖಾನೆ ಹಾಕುತ್ತಿರುವದನ್ನು ವಿರೋಧಿಸಿ ಹಲವು ಹಂತದ ಹೋರಾಟ ಜರುಗಿದ್ದು, ಜನರಿಗೆ ಮಾರಕವಾಗಿರುವ ಎಲ್ಲಾ ಕಂಪನಿಗಳನ್ನು ಕೊಪ್ಪಳದಿಂದ ಒದ್ದೋಡಿಸಲು ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಮತ್ತು ಪರಿಸರ ಹಿತರಕ್ಷಣಾ ವೇದಿಕೆ ಜಂಟಿ ಕ್ರಿಯಾ ವೇದಿಕೆ ಸಭೆಯಲ್ಲಿ ನಿರ್ಣಯಿಸಲಾಯಿತು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಜಂಟಿ ಕ್ರಿಯಾ ವೇದಿಕೆ ಸಭೆಯಲ್ಲಿ ಬಲ್ಡೋಟಾದ ಎಂಎಸ್‌ಪಿಲ್‌ನ ಬಿಎಸ್‌ಪಿಎಲ್ ಕಾರ್ಖಾನೆ ವಿರುದ್ಧ ಹೋರಾಟದ ರೂಪರೇಷೆ ಸಿದ್ಧಪಡಿಸುವ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಅಂತಿಮ ನಿರ್ಣಯ ತೆಗೆದುಕೊಂಡಿದ್ದು ಹಲವು ಹೋರಾಟಕ್ಕೆ ಕೊಪ್ಪಳ ಮತ್ತು ಭಾದಿತ ಪ್ರದೇಶದ ಜನರನ್ನು ಸಜ್ಜುಗೊಳಿಸಲು



ನಿರ್ಣಯ ತೆಗೆದುಕೊಳ್ಳಲಾಯಿತು.

ಕೊಪ್ಪಳದ 31 ಮತ್ತು ಭಾಗ್ಯನಗರದ 19 ಹಾಗೂ ಸುಮಾರು 30 ಗ್ರಾಮಗಳಲ್ಲಿ ಪರಿಸರ ಜಾಗೃತಿ ಸಭೆ ನಡೆಸುವದು. ನಗರದ ಅಶೋಕ ವೃತ್ತದಲ್ಲಿ ನಿರಂತರ ಧರಣಿ ಸತ್ಯಾಗ್ರಹ ಹಮ್ಮಿಕೊಂಡು ಪ್ರತಿಯೊಂದು ಸಂಘಟನೆಗಳನ್ನು ಅದರಲ್ಲಿ ತೊಡಗಿಸಿಕೊಳ್ಳುವದು. ಕ್ಷೇತ್ರದ ಸುಮಾರು 30 ಸಾವಿರ ಕುಟುಂಬಗಳಿಂದ, ವಿದ್ಯಾರ್ಥಿಗಳಿಂದ ರಾಷ್ಟ್ರಪತಿಗಳು, ಮುಖ್ಯಮಂತ್ರಿಗಳು, ಹಸಿರು ನ್ಯಾಯಾಧಿಕರಣಕ್ಕೆ ಮತ್ತು ಬಲ್ಡೋಟಾ ಮಾಲಿಕರಿಗೆ ಸುಮಾರು ಒಂದು ಲಕ್ಷ ಪತ್ರ ಬರೆಸುವ ಮೂಲಕ ಪತ್ರ ಚಳುವಳಿ ನಡೆಸುವದು.

ಕೊಪ್ಪಳ ಜಿಲ್ಲಾ ಆಫ್‌ಸೆಟ್ ಪ್ರಿಂಟರ್ಸ್ ಅಸೋಸಿಯೇಷನ್ ಅವರಿಂದ ಪೋಸ್ಟರ್ ಜಾಗೃತಿ ಅಭಿಯಾನ ನಡೆಸುವದು. ಕೊಪ್ಪಳದಿಂದ ಗಿಣಿಗೇರಾವರೆಗೆ ಸೈಕಲ್ ಜಾಥಾ ಹಾಗೂ ಕೊಪ್ಪಳ ಕಾರ್ಖಾನೆಗಳಿಂದ ಆಗುತ್ತಿರುವ ಪರಿಸರ ಹಾನಿ ಕುರಿತು ರಾಜ್ಯಮಟ್ಟದ ಕಿರುಚಿತ್ರ ಸ್ಪರ್ಧೆ ಏರ್ಪಡಿಸುವದು ಸೇರಿದಂತೆ ಹಲವು ನಿರ್ಣಯಗಳನ್ನು ಅಂಗೀಕರಿಸಲಾಗಿದ್ದು, ಪೇಂಟ್ ಅಭಿಯಾನ ಮುಗಿದ ತಕ್ಷಣ ಹಂತ ಹಂತವಾಗಿ ಜಾರಿಗೆ ತರಲು ಸಭೆ ಒಕ್ಕೊರಲ ನಿರ್ಣಯ ತೆಗೆದುಕೊಂಡಿದ್ದು, ವಿವಿಧ ಕಾರ್ಯಕ್ರಮಗಳಿಗೆ ಪ್ರತ್ಯೇಕ ಸಮಿತಿ ರಚಿಸಿ ಜವಾಬ್ದಾರಿ ನೀಡಲು ಸಭೆ ಒಪ್ಪಿದೆ.

ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಮತ್ತು ಪರಿಸರ ಹಿತರಕ್ಷಣಾ ವೇದಿಕೆಯ ಪ್ರಮುಖರುಗಳಾದ ಪ್ರೊ. ಅಲ್ಲಮಪ್ರಭು ಬೆಟ್ಟದೂರು, ಸೋಮರಡ್ಡಿ ಅಳವಂಡಿ, ಬಸವರಾಜ ಶೀಲವಂತರ, ರಮೇಶ ತುಪ್ಪದ, ಮಹಾಂತೇಶ ಕೊತಬಾಳ, ಮಂಜುನಾಥ ಜಿ. ಗೊಂಡಬಾಳ, ಶರಣು ಗಡ್ಡಿ, ಡಾ. ಮಂಜುನಾಥ ಸಜ್ಜನ್, ಸಂತೋಷ ದೇಶಪಾಂಡೆ, ಮುದುಕಪ್ಪ ಹೊಸಮನಿ, ಶಿವಕುಮಾರ ಕುಕನೂರ, ಶರಣು ಪಾಟೀಲ, ಶರಣು ಡೊಳ್ಳಿನ, ಕೇಶವ ಕಟ್ಟಿಮನಿ, ಎಸ್. ಎ. ಗಫಾರ್, ಮಖಬುಲ್ ರಾಯಚೂರ ಇತರರು ಇದ್ದರು.

# ಕೊಪ್ಪಳ ನಗರಸಭೆ: ಸಾರ್ವಜನಿಕ ಆಸ್ತಿ ಅತಿಕ್ರಮಣ ತೆರವುಗೊಳಿಸಲು ಸೂಚನೆ

**ಕೊಪ್ಪಳ :** ಕೊಪ್ಪಳ ನಗರಸಭೆ ವ್ಯಾಪ್ತಿಯಲ್ಲಿನ ಆಸ್ತಿ ಮಾಲೀಕರು, ಬೀದಿ ಬದಿ ವ್ಯಾಪಾರಸ್ಥರು ಅತಿ-ಕ್ರಮಿಸಿರುವ ಸಾರ್ವಜನಿಕ ಆಸ್ತಿಗಳನ್ನು ತೆರವುಗೊಳಿಸುವಂತೆ ಸೂಚಿಸಲಾಗಿದೆ.

ನಗರಸಭೆ ವ್ಯಾಪ್ತಿಯ ಸಾರ್ವಜನಿಕ ರಸ್ತೆ ಹಾಗೂ ಪಾದಾಚಾರಿ ರಸ್ತೆಯನ್ನು ಅತಿಕ್ರಮಿಸಿ ವ್ಯಾಪಾರ ಮಾಡುತ್ತಿರುವ ಬೀದಿಬದಿ ವ್ಯಾಪಾರಸ್ಥರು ಹಾಗೂ ಸಾರ್ವಜನಿಕ ರಸ್ತೆ, ಉದ್ಯಾನವನ, ನಾಗರಿಕ ಸೌಲಭ್ಯ ಹಾಗೂ ಇನ್ನಿತರ ಯಾವುದೇ ಸರಕಾರಿ ಆಸ್ತಿ ಅತಿಕ್ರಮಿಸಿದ ಆಸ್ತಿ ಮಾಲೀಕರು 15 ದಿನಗಳೊಳಗೆ ಅತಿಕ್ರಮಣ ತೆರವುಗೊಳಿಸಬೇಕು.

ನಿಗದಿತ ಅವಧಿಯಲ್ಲಿ ಅತಿ-ಕ್ರಮಣ ತೆರವುಗೊಳಿಸದೇ ಇದ್ದಲ್ಲಿ ನಗರಸಭೆಯಿಂದ ತೆರವುಗೊಳಿಸಲಾಗುವುದು ಹಾಗೂ ತೆರವುಗೊಳಿಸಲು ತಗುಲುವ ವೆಚ್ಚವನ್ನು ಸಂಬಂಧಿಸಿದವರಿಂದ ವಸೂಲಿ ಮಾಡಲಾಗುವುದು ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



**ಕೊಪ್ಪಳ ನಗರದ ನಗರಸಭೆಯಲ್ಲಿ ಎಲ್ಲಾ ವಾರ್ಡುಗಳಲ್ಲಿ ಸಮರ್ಪಕವಾಗಿ ನೀರು ಸರಬರಾಜು, ಶೌಚಾಲಯ, ಚರಂಡಿ ವ್ಯವಸ್ಥೆ, ರಸ್ತೆಗಳ ದುರಸ್ತಿ ಇಲ್ಲ ಮೂಲಭೂತ ಸೌಕರ್ಯಗಳ ಕುರಿತು ಈ ಸಂದರ್ಭದಲ್ಲಿ ಲೋಕಸಭಾ ಸದಸ್ಯರಾದ ರಾಜಶೇಖರ ಹಿಟ್ನಾಳ, ಕೊಪ್ಪಳದ ಜನಪ್ರಿಯ ಶಾಸಕ ಕೆ ರಾಘವೇಂದ್ರ ಹಿಟ್ನಾಳ್ ರವರು, ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ರವರು, ಉಪಾಧ್ಯಕ್ಷರಾದ ಅಶ್ವಿನಿ ಭಗತ್ ಕುಮಾರ್ ರವರು, ಸರ್ವ ಸದಸ್ಯರು, ಸ್ಥಾಯಿ ಸಮಿತಿ ಅಧ್ಯಕ್ಷರು, ಸರ್ವ ಸದಸ್ಯರು, ಹಾಗೂ ಅಧಿಕಾರಿಗಳನ್ನು ಒಳಗೊಂಡಂತೆ ಸೂಕ್ತವಾದ ಕ್ರಮವನ್ನು ಕೈಗೊಳ್ಳುವಂತೆ ಸೂಚಿಸಲಾಯಿತು.**

## ಡಾ. ಎಚ್.ಎನ್. ನ್ಯಾಷನಲ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಅರ್ಹತಾ ಪ್ರಶಸ್ತಿ ಸಮಾರಂಭ
## ಸಾಧಕರ ಬದುಕು ಪ್ರೇರಣೆಯಾಗಬೇಕು: ಪದ್ಮಶ್ರೀ ಡಾ. ವಿಜಯಲಕ್ಷ್ಮಿ ದೇಶಮಾನೆ



**ಬೆಂಗಳೂರು :** ವಿದ್ಯಾರ್ಥಿಗಳಿಗೆ ಸಾಧಕರ ಬದುಕು ಪ್ರೇರಣೆಯಾಗಬೇಕು. ಭವ್ಯ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗಬೇಕು ಎಂದು ಪದ್ಮಶ್ರೀ ಡಾ. ವಿಜಯಲಕ್ಷ್ಮಿ ದೇಶಮಾನೆ ಹೇಳಿದ್ದಾರೆ.

ನಗರದ ಡಾ. ಎಚ್.ಎನ್. ನ್ಯಾಷನಲ್ ಕಾಲೇಜ್ ಆಫ್ ಎಂಜಿನಿಯರಿಂಗ್ ಪ್ರಥಮ ಸೆಮಿಸ್ಟರ್‌ನಲ್ಲಿ ಸಾಧನೆಗೈದ 272 ವಿದ್ಯಾರ್ಥಿಗಳನ್ನು ಗೌರವಿಸಿ, ಡೀನ್ ಸಾಧಕರು, ಡಾ. ಆನಿ ಬೆಸಂಟ್ ಹಾಗೂ ಸಂಪತ್ಗಿರಿ ರಾವ್ ಪುರಸ್ಕಾರಗಳನ್ನು ಪ್ರದಾನ ಮಾಡಿ ಮಾತನಾಡಿದ ಅವರು, ನ್ಯಾಷನಲ್ ಕಾಲೇಜಿನ ಪರಂಪರೆ ಮಹೋನ್ನತವಾದದ್ದು. ವಿಶೇಷವಾಗಿ ಡಾ. ಎಚ್. ನರಸಿಂಹಯ್ಯ ಅವರ ದೃಷ್ಟಿಕೋನ ಮತ್ತು ಜೀವನ ನಮಗೆ ಮಾರ್ಗದರ್ಶವಾಗಿದೆ. ಅವರು ವಿದ್ಯಾರ್ಥಿಗಳನ್ನು ಸದಾ ಪ್ರಭಾವಿಸಿದ ಮಹಾನ್ ಚೇತನ ಎಂದರು.

ನ್ಯಾಷನಲ್ ಎಜ್ಯುಕೇಶನ್ ಸೊಸೈಟಿ ಅಧ್ಯಕ್ಷ ಡಾ. ಎಚ್.ಎನ್. ಸುಬ್ರಹ್ಮಣ್ಯ ಮಾತನಾಡಿ, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪಠ್ಯ, ಪಠ್ಯೇತರ ಚಟುವಟಿಕೆಗಳು ಪೂರಕವಾಗಿವೆ. ನಮ್ಮ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಯಶಸ್ಸನ್ನು ಉತ್ಸವದ ರೀತಿಯಲ್ಲಿ ಆಚರಿಸುತ್ತೇವೆ. ಪ್ರತಿಯೊಂದು ಹಂತದಲ್ಲಿ ಅವರ ಶ್ರೇಯೋಭಿವೃದ್ಧಿಗೆ ಒತ್ತು ನೀಡುತ್ತೇವೆ ಎಂದರು.

ಎನ್‌ಇಎಸ್‌ನ ಗೌರವ ಕಾರ್ಯದರ್ಶಿ ಹಾಗೂ ಡಾ. ಎಚ್-ಎನ್‌ಎನ್ಸಿಇ ಅಧ್ಯಕ್ಷ ವಿ. ವೆಂಕಟಶಿವರೆಡ್ಡಿ ಮಾತನಾಡಿ, ವಿದ್ಯಾರ್ಥಿ ಸಬಲೀಕರಣ ಇಂದಿನ ಅಗತ್ಯವಾಗಿದ್ದು, ಶಿಕ್ಷಕರು ನಿಜವಾದ ಮಾರ್ಗದರ್ಶಕರು. ಉತ್ತಮ ಗುರುವಿದ್ದರೆ ಭವಿಷ್ಯ ಉಜ್ವಲವಾಗಲಿದೆ ಎಂದರು.

ಡಾ. ಎಚ್‌ಎನ್‌ಎನ್ಸಿಇ ಯ ಮುಖ್ಯ ಮಾರ್ಗದರ್ಶಕ ಡಾ. ಕೆ.ಎನ್.ಬಿ. ಮೂರ್ತಿ, ಖಜಾಂಚಿ ತಲ್ಲಂ ಆರ್. ದ್ವಾರಕನಾಥ್, ಗೌರವ ಕಾರ್ಯದರ್ಶಿ ಬಿ.ಎಸ್. ಅರುಣ್ ಕುಮಾರ್, ಎನ್‌ಇಎಸ್ ಅಧ್ಯಕ್ಷ ಡಾ. ಪಿ.ಎಲ್. ವೆಂಕಟರಾಮರೆಡ್ಡಿ, ವರ್ಕ್ಸ್ ಕಮಿಟಿ ಅಧ್ಯಕ್ಷ ಜಿ.ಎಂ. ರವೀಂದ್ರ, ಪ್ರಾಂಶುಪಾಲ ಡಾ. ಸಿ. ವಿಜಯಲಕ್ಷ್ಮಿ, ಎನ್ಸಿಜೆ ಪ್ರಾಂಶುಪಾಲ ಪ್ರೊ. ಮಾಮತಾ, ಎನ್ಸಿಜೆಪಿಯು ಸಂಯೋಜಕರಾದ ಪ್ರೊ. ಅಲಕನಂದಾ, ಸಂಯೋಜಕಿ, ಡಾ. ಎಚ್‌ಎನ್‌ಎನ್ಸಿಇ ಉಪ ಪ್ರಾಂಶುಪಾರಾದ ಡಾ. ನಂದೀಶ್ ಮತ್ತಿತರರು ಉಪಸ್ಥಿತರಿದ್ದರು.

# ರಜಾ ದಿನಗಳಲ್ಲಿ ಕಾರ್ಯನಿರ್ವಹಿಸುವ ಉಪ ನೋಂದಣಿ ಕಚೇರಿಗಳ ವೇಳಾಪಟ್ಟಿ ಪ್ರಕಟ

**ಕೊಪ್ಪಳ:** ಜಿಲ್ಲಾ ವ್ಯಾಪ್ತಿಯಲ್ಲಿನ ಉಪನೋಂದಣಿ ಕಚೇರಿಗಳು ಸರದಿ ಆದ-ಾರದಲ್ಲಿ ಜೂನ್‌ನಿಂದ ಡಿಸೆಂಬರ್‌ವರೆಗಿನ 2ನೇ ಶನಿವಾರ, 4ನೇ ಶನಿವಾರ ಮತ್ತು ಭಾನುವಾರದ ರಜಾ ದಿನಗಳಂದು ಕಾರ್ಯನಿರ್ವಹಿಸುವ ಕು-ರಿತಂತೆ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಗಂಗಾವತಿ ತಾಲ್ಲೂಕಿನ ಉಪ ನೋಂದಣಿ ಕಚೇರಿಯು ಜೂನ್ 01, ಜೂನ್ 28, ಜುಲೈ 20, ಆಗಸ್ಟ್ 10, ಸೆಪ್ಟೆಂಬರ್ 07, ಸೆಪ್ಟೆಂಬರ್ 28, ಅಕ್ಟೋಬರ್ 25, ನವೆಂಬರ್ 16 ಹಾಗೂ ಡಿಸೆಂಬರ್ 14 ರ ರಜಾ ದಿನಗಳಂದು ಕಾರ್ಯನಿರ್ವಹಿಸಲಿದೆ.

ಕಾರಟಗಿ ತಾಲ್ಲೂಕಿನ ಉಪ ನೋಂದಣಿ ಕಚೇರಿಯು ಜೂನ್ 08, ಜೂನ್ 29, ಜುಲೈ 26, ಆಗಸ್ಟ್ 17, ಸೆಪ್ಟೆಂಬರ್ 13, ಅಕ್ಟೋಬರ್ 05, ಅಕ್ಟೋಬರ್ 26, ನವೆಂಬರ್ 22 ಹಾಗೂ ಡಿಸೆಂಬರ್ 21 ರ ರಜಾ ದಿನಗಳಂದು ಕಾರ್ಯನಿರ್ವಹಿಸಲಿದೆ.

ಕುಷ್ಟಗಿ ತಾಲ್ಲೂಕಿನ ಉಪ ನೋಂದಣಿ ಕಚೇರಿಯು ಜೂನ್ 14, ಜುಲೈ 06, ಜುಲೈ 27, ಆಗಸ್ಟ್ 23, ಸೆಪ್ಟೆಂಬರ್ 14, ಅಕ್ಟೋಬರ್ 11, ನವೆಂಬರ್ 2, ನವೆಂಬರ್ 23 ಹಾಗೂ ಡಿಸೆಂಬರ್ 27 ರ ರಜಾ ದಿನಗಳಂದು ಕಾರ್ಯನಿರ್ವಹಿಸಲಿದೆ.

ಯಲಬುರ್ಗಾ ತಾಲ್ಲೂಕಿನ ಉಪ ನೋಂದಣಿ ಕಚೇರಿಯು ಜೂನ್ 15, ಜುಲೈ 12, ಆಗಸ್ಟ್ 03, ಆಗಸ್ಟ್ 24, ಸೆಪ್ಟೆಂಬರ್ 21, ಅಕ್ಟೋಬರ್ 12, ನವೆಂಬರ್ 08, ಡಿಸೆಂಬರ್ 07 ಹಾಗೂ ಡಿಸೆಂಬರ್ 28 ರ ರಜಾ ದಿನಗಳಂದು ಕಾರ್ಯನಿರ್ವಹಿಸಲಿದೆ.

ಕೊಪ್ಪಳ ತಾಲ್ಲೂಕಿನ ಉಪ ನೋಂದಣಿ ಕಚೇರಿಯು ಜೂನ್ 22, ಜುಲೈ 13, ಆಗಸ್ಟ್ 09, ಆಗಸ್ಟ್ 31, ಸೆಪ್ಟೆಂಬರ್ 27, ಅಕ್ಟೋಬರ್ 19, ನವೆಂಬರ್ 09 ಹಾಗೂ ಡಿಸೆಂಬರ್ 13 ರ ರಜಾ ದಿನಗಳಂದು ಕಾರ್ಯನಿರ್ವಹಿಸಲಿದೆ.

ರಜಾ ದಿನಗಳಂದು ಕಾರ್ಯನಿರ್ವಹಿಸುವ ಉಪ ನೋಂದಣಿ ಕಚೇ-ರಿಗಳಿಗೆ ಸಂಬಂಧಿಸಿದ ತಾಲ್ಲೂಕಿನ ಸಾರ್ವಜನಿಕರು ಭೇಟಿ ನೀಡಬಹುದು ಎಂದು ಜಿಲ್ಲಾ ನೋಂದಣಾಧಿಕಾರಿಗಳಾದ ಸುಭಾಸ ಹೊಸಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂಗನವಾಡಿ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನ

**ಬಾಗಲಕೋಟೆ :** ಶಿಶು ಅಭಿವೃದ್ಧಿ ಯೋಜನೆ, ಹುನಗುಂದ ವ್ಯಾಪ್ತಿಯ 26 ಅಂಗನವಾಡಿ ಕಾರ್ಯಕರ್ತೆ ಹಾಗೂ 82 ಸಹಾಯಕಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಮಾ.26ರಂದು ನಡೆದ ಆಯ್ಕೆ ಸಮಿತಿಯಲ್ಲಿ ತಾತ್ಕಾಲಿಕವಾಗಿ 24 ಕಾರ್ಯಕರ್ತೆ ಹಾಗೂ 74 ಸಹಾಯಕಿಯರನ್ನು ಆಯ್ಕೆ ಮಾಡಲಾಗಿದೆ. 2 ಕಾರ್ಯಕರ್ತೆ ಹಾಗೂ 8 ಸಹಾಯಕಿ ಹುದ್ದೆಗಳಿಗೆ ಅರ್ಜಿ ಬಂದಿಲ್ಲದ ಕಾರಣ ಮರು ಪ್ರಕಟಣೆ ನೀಡಲಾಗುತ್ತದೆ.

ಆಯ್ಕೆ ಪಟ್ಟಿಯನ್ನು ಕಚೇರಿ ಮತ್ತು ಸಂಬಂಧಿತ ಅಂಗನವಾಡಿ ಕೇಂದ್ರಗಳ ಸೂಚನಾ ಫಲಕದಲ್ಲಿ ಪ್ರದರ್ಶಿಸಲಾಗಿದೆ.

ಆಯ್ಕೆಗೆ ಆಕ್ಷೇಪಣೆಗಳಿದ್ದರೆ, ಸಂಬಂಧಿತ ದಾಖಲೆಗಳೊಂದಿಗೆ 2025ರ ಜೂನ್.04 ರೊಳಗೆ ಹುನಗುಂದ ಶಿಶು ಅಭಿವೃದ್ಧಿ ಕಚೇರಿ ಅಥವಾ ಬಾಗಲಕೋಟೆಯ ಉಪ ನಿರ್ದೇಶಕರಿಗೆ ಲಿಖಿತ ಆಕ್ಷೇಪಣೆ ಸಲ್ಲಿಸಬಹುದು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಕುಷ್ಟಗಿ ಪುರಸಭೆ: ಆಕ್ಷೇಪಣೆ ಆಹ್ವಾನ

**ಕೊಪ್ಪಳ :** ಕುಷ್ಟಗಿ ಪುರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿಟ್ಟ ನಿವೇಶನಗಳನ್ನು ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಹಾಗೂ ಬಾಲಭವನ ನಿರ್ಮಾಣಕ್ಕಾಗಿ ನೀಡಲು ಸಾಮಾನ್ಯ ಸಭೆಯಲ್ಲಿ ನಿರ್ಧರಿಸಲಾಗಿದ್ದು, ಈ ಕುರಿತು ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಕುಷ್ಟಗಿ ಪಟ್ಟಣದ 11 ಅಂಗನವಾಡಿ ಕೇಂದ್ರಗಳಿಗೆ ಪಟ್ಟಣದ ವಿವಿಧ ಸರ್ವೇ ನಂಬರ್‌ಗಳಾದ 46/1 ಹಾಗೂ 46/1ಬಿ, 218/4, 53/2ಬಿ2, 113/1, 53/3, 221/2, 111/1, 453/2, 53/2ಬಿ4 ಮತ್ತು 53/9, 118/4 ಹಾಗೂ 112/ಬಿ ವಸತಿ ವಿನ್ಯಾಸದಲ್ಲಿರುವ ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿಟ್ಟ ನಿವೇಶನಗಳನ್ನು ಅಂಗನವಾಡಿ ಕಟ್ಟಡ ಹಾಗೂ ಬಾಲಭವನ ನಿರ್ಮಾಣಕ್ಕೆ ನೀಡಲು ದಿನಾಂಕ: 08-05-2025 ರಂದು ನಡೆದ ಪುರಸಭೆ ಸಾಮಾನ್ಯ ಸಭೆಯಲ್ಲಿ ಸರ್ವ ಸದಸ್ಯರು ಒಪ್ಪಿಗೆ ನೀಡಿರುತ್ತಾರೆ.

# ಶಾಲಾ ಪ್ರಾರಂಭೋತ್ಸವ: ವಿದ್ಯಾರ್ಥಿಗಳಿಗೆ ಅಕ್ಷರ ಅಭ್ಯಾಸ ಮೂಲಕ ಅದ್ದೂರಿ ಸ್ವಾಗತ: ಸಿಹಿ ಹಂಚಿಕೆ



**ಬಾಗಲಕೋಟೆ :** ವಿದ್ಯಾರ್ಥಿಗಳಿಗೆ ಹೂ ನೀಡಿ ಸಿಹಿ ತಿನಿಸಿ-ಶಾಲೆಗೆ ಸ್ವಾಗತಿಸಿ, ಅಕ್ಷರ ಅಭ್ಯಾಸ ಮಾಡಿಸುವ ಮೂಲಕ ಅದ್ದೂರಿಯಾಗಿ ]ಶಾಲಾ ಪ್ರಾರಂಭೋತ್ಸವ ಜರುಗಿತು

ನಗರದ ಪ್ರತಿಷ್ಠಿತ ಬಿ.ವಿ.ವಿ.ಸಂಘದ ಬಸವೇಶ್ವರ ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ನ್ಯೂ ಹೈಸ್ಕೂಲ್ ನಲ್ಲಿ ಗುರುವಾರ ಶೈಕ್ಷಣಿಕ 2025-26 ನೇ ಸಾಲಿನ ಶಾಲಾ ಪ್ರಾರಂಭೋತ್ಸವದ ನಿಮಿತ್ಯ ವಿದ್ಯಾರ್ಥಿಗಳಿಗೆ ಹೂ ನೀಡಿ, ಸಿಹಿ ಹಂಚಿ, ಅಕ್ಷರ ಅಭ್ಯಾಸ ಮಾಡಿಸುವ ಮೂಲಕ ಶಾಲಾ ಪ್ರಾರಂಭೋತ್ಸವಕ್ಕೆ ಅದ್ದೂರಿಯಾಗಿ ಚಾಲನೆ ನೀಡಲಾಯಿತು, ಶಾಲೆಯಲ್ಲಿ ವಿಶೇಷವಾಗಿ ಸರಸ್ವತಿ ಹಾಗೂ ಗಣಪತಿ ಪೂಜೆಯನ್ನು ಮಾಡಿ ಮಕ್ಕಳಿಗೆ ಆರತಿ ಮಾಡುವ ಮೂಲಕ ಬರಮಾಡಿಕೊಳ್ಳಲಾಯಿತು, ವಿದ್ಯಾರ್ಥಿಗಳಿ ಗುಲಾಬಿ ಹೂ ನೀಡಿ ಸಿಹಿ ಹಂಚಿ ಶುಭಕೋರಲಾಯಿತು.

ಗಮನಸೇಳದ ಅಕ್ಷರ ಅಬ್ಯಾಸ: ಪೂರ್ವ ಪ್ರಾಥಮೀಕ ವಿಭಾಗದ 8 ವಿದ್ಯಾರ್ಥಿಗಳಿಗೆ ಶಿಕ್ಷಕ ಮಾತೆಯರು ತಮ್ಮ ಮೇಲೆ ಕೂಡಿಸಿಕೊಂಡು ಗುರುಕುಲ ಪದ್ದತಿಯಂತೆ ಅಕ್ಕಿ ಪಾತ್ರೆಯಲ್ಲಿ ಅಕ್ಷರ ಅಭ್ಯಾಸಮಾಡಿ ಮಕ್ಕಳ ಶೈಕ್ಷಣಿಕ ಶಿಕ್ಷಣ ಉಜ್ವಲವಾಗಿರಲೆಂದು ಶುಭ ಆರೈಸಲಾಯಿತು.

ವಿಶೇಷಚೇತನ ಮಕ್ಕಳ ಸಂಭ್ರಮ: ಬಸವೇಶ್ವರ ಸಮನ್ವಯ ಶಾಲೆಯಲ್ಲಿ ವಿಶೇಷಚೇತನ ಮಕ್ಕಳ ಶಾಲಾ ಪ್ರಾರಂಭೋತ್ಸದಲ್ಲಿ ವಿಶೇಷಚೇತನ ಮಕ್ಕಳ ಸಂಭ್ರಮ ಮನೆಮಾಡಿತ್ತು, ಇಡಿ ಶಾಲಾ ಆವರಣವನ್ನು ಮಾವಿನ ತೊಳಿರು, ಹೂಗಳಿಂದ ಶೃಂಗರಿಸಲಾಗಿ-ತ್ತು, ಸರಸ್ವತಿ ಪೂಜೆ ಮಾಡುವ ಮೂಲಕ ಅವರನ್ನು ಸ್ವಾಗತಿಸಲಾಯಿತು.

ಈ ಸಂದರ್ಭದಲ್ಲಿ ಪದನಿಮಿತ್ಯ ಕಾರ್ಯದರ್ಶಿ ಹಾಗೂ ಪ್ರಾಚಾರ್ಯ ಕೆ.ಎಚ್.ಹೊಸುರ, ಎಮ್.ಆರ್. ಮನಹಳ್ಳಿ, ಮುಖ್ಯೋಪಾದ್ಯಯಕಿ ಆರ್.ಎನ್.ಜೋಶಿ ಸೇರಿದಂತೆ ಶಿಕ್ಷಕ ವೃಂದ, ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಮಕ್ಕಳಿಗಾಗಿ ತೋಟ ಶಾಲೆ: "ನೋಡಿ ಕಲಿ, ಮಾಡಿ ತಿಳಿ"

**ಬಾಗಲಕೋಟ :** ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಐದು ದಿನಗಳ ಮಕ್ಕಳ ತೋಟಗಾರಿಕೆ ಬೇಸಿಗೆ ಶಿಬಿರವು ಯಶಸ್ವಿಯಾಗಿ ಪೂರ್ಣಗೊಂಡಿತು. "ತೋಟ ಶಾಲೆ ? ನೋಡಿ ಕಲಿ, ಮಾಡಿ ತಿಳಿ" ಎಂಬ ಘೋಷವಾಕ್ಯದಡಿಯಲ್ಲಿ ನಡೆದ ಈ ಶಿಬಿರದಲ್ಲಿ 6 ರಿಂದ 14 ವರ್ಷದ 30ಕ್ಕೂ ಹೆಚ್ಚು ಮಕ್ಕಳು ಉತ್ಸಾಹದಿಂದ ಪಾಲ್ಗೊಂಡರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ವಿಸ್ತರಣಾ ನಿರ್ದೇಶಕರಾದ ಡಾ. ವೆಂಕಟೇಶಲು, "ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಇಂತಹ ಶಿಬಿರಗಳು ಉತ್ತಮ ವೇದಿಕೆಯಾಗುತ್ತವೆ. ರಜೆಯ ಸಮಯದಲ್ಲಿ ಮಕ್ಕಳಿಗೆ ತೋಟಗಾರಿಕೆ ಜ್ಞಾನವನ್ನು ಕ್ರಿಯಾತ್ಮಕವಾಗಿ ಅರ್ಥಮಾಡಿಕೊಳ್ಳಲು ಇದು ಉತ್ತಮ ಅವಕಾಶ" ಎಂದು



ಹೇಳಿದರು.

ಈ ಶಿಬಿರದಲ್ಲಿ ಮಕ್ಕಳಿಗೆ ಮಣ್ಣು ಮತ್ತು ನರ್ಸರಿಯ ಪ್ರಾಮುಖ್ಯತೆ, ಮೈಕ್ರೋಗ್ರೀನ್ಸ್ ಬೆಳೆಸುವ ವಿಧಾನ, ಬೀಜ ಬಿತ್ತನೆ, ಕೈತೋಟ ನಿರ್ಮಾಣ, ಎರೆಹುಳುವಿನ ಗೊಬ್ಬರ ತಯಾರಿಕೆ, ಸಾವಯವ ಕೃಷಿ, ಜೈವಿಕ ಕೀಟನಾಶಕ ತಯಾರಿಕೆ, ಲಂಬ ಉದ್ಯಾನ ಹಾಗೂ ತಾರಸಿ ತೋಟ ನಿರ್ಮಾಣ, ಹೂ ಹಾಗೂ ಅಲಂಕಾರಿಕ ಸಸ್ಯಗಳ ಬೆಳವಣಿಗೆ, ಕಸಿ, ಬಡ್ಡಿಂಗ್, ಲೇಯರಿಂಗ್, ಹೂದಾನಿ ಹಾಗೂ ಹೂ ಗುಚ್ಛ ತಯಾರಿಕೆ ಮುಂತಾದ ವಿಷಯಗಳಲ್ಲಿ ಪ್ರಾಯೋಗಿಕ ತರಬೇತಿ ನೀಡಲಾಯಿತು.

ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಬಾಪುರಾಯಗೌಡ ಪಾಟೀಲ, ಡಾ. ಸಂಜೀವರೆಡ್ಡಿ ಜಿ. ರಡ್ಡಿ, ಡಾ. ರಾಮನಗೌಡ ಹಡಗಲಿ, ಡಾ. ಹಾದಿಮನಿ, ಡಾ. ಬಸವರಾಜಪ್ಪ ಹೆಚ್.ಆರ್. ಮತ್ತು ಡಾ. ಭುವನೇಶ್ವರಿ ಜಿ. ಅವರು ಭಾಗವಹಿಸಿ ಮಕ್ಕಳಿಗೆ ವೈವಿಧ್ಯಮಯ ವಿಷಯಗಳ ಕು-ರಿತು ತಿಳಿಸಿದರು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ತೋಟಗಾರಿಕೆ ಮಹಾವಿದ್ಯಾಲಯದ ಡೀನರಾದ ಡಾ. ಬಾಲಾಜಿ ಎಸ್. ಕುಲಕರ್ಣಿ ಅಧ್ಯಕ್ಷತೆ ವಹಿಸಿದರು. ಶಿಬಿರದ ಸಂಂ-ಯೋಜಕರಾದ ಡಾ. ದೀಪಾ ತೇರದಾಳ ಅವರು ಕಾರ್ಯಕ್ರಮ ನಿರೂಪಿಸಿ, ಶಿಬಿರದ ಯಶಸ್ಸಿಗೆ ಸಹಕಾರ ನೀಡಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

# ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ವಸತಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** 2025–26ನೇ ಸಾಲಿಗಾಗಿ ಕೊಪ್ಪಳ ಮತ್ತು ಕುಷ್ಟಗಿ ತಾಲ್ಲೂಕಿನಲ್ಲಿರುವ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಸತಿ ನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಪಿಯುಸಿ, ಐಟಿಐ, ಡಿಪ್ಲೊಮಾ ಹಾಗೂ ಪ್ರಥಮ ವರ್ಷದ ಪದವಿ ಮಟ್ಟದ ವಿದ್ಯಾರ್ಥಿಗಳು ಸ್ಟೇಟ್ ಹಾಸ್ಟೆಲ್ ಪೋರ್ಟಲ್ https://shp.karnataka.gov.in/ ನಲ್ಲಿ ಜೂನ್ 28 ರೊಳಗೆ ಆನ್‌ಲೈನ್ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಿದ ನಂತರ ಅರ್ಜಿ ಪ್ರತಿಯೊಂದಿಗೆ ಅಗತ್ಯ ದಾಖಲೆಗಳನ್ನು ಸಂಬಂಧಿಸಿದ ವಸತಿ ನಿಲಯಗಳಿಗೆ ಸಲ್ಲಿಸಬೇಕು.

ಕುಷ್ಟಗಿಯ ಶಾಖಾಪುರ ರಸ್ತೆಯ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ, ಕೊಪ್ಪಳದ ಆರೋಗ್ಯ ಬಡಾವಣೆ, ಹೇಮರೆಡ್ಡಿ ಮಲ್ಲಮ್ಮನಗುಡಿ ಹತ್ತಿರ ಕೊಪ್ಪಳ–01 ಹಾಗೂ ಕೊಪ್ಪಳ–02, ವಿಜಯನಗರ ಬಡಾವಣೆ, ಬಿಲಾಲ ನಗರದಲ್ಲಿರುವ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ಹಾಗೂ ಗಣೇಶ ತೆಗ್ಗು, ಕೊಪ್ಪಳ–1, ಕೊಪ್ಪಳ–2 ಮತ್ತು ಕೊಪ್ಪಳ–3 ನಲ್ಲಿರುವ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕಿಂ–ಯರ ವಸತಿ ನಿಲಯಗಳಿಗೆ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಸರ್ಕಾರಿ ಅಥ–ವಾ ಅಂಗೀಕೃತ ಕಾಲೇಜುಗಳಲ್ಲಿ ಮೆಟ್ರಿಕ್ ನಂತರದ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರಬೇಕು. ವಸತಿ ನಿಲಯಗಳಲ್ಲಿ ಶೇ.75 ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮತ್ತು ಶೇ.25 ಇತರೆ ವರ್ಗದವರಿಗೆ ಮೀಸಲಿಡಲಾಗಿದೆ. ಅಲ್ಪಸಂಖ್ಯಾತರ ವಿದ್ಯಾರ್ಥಿಗಳು, ಹಿಂದುಳಿದ ವರ್ಗಗಳಾದ 2ಎ, 2ಬಿ, 3ಎ, 3ಬಿ ವಿದ್ಯಾರ್ಥಿಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನವು 2.50 ಲಕ್ಷ ರೂ.ಗಳಿಗಿಂತ ಮೀರಿರಬಾರದು. ಪ್ರವರ್ಗ–1 ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನವು 01 ಲಕ್ಷ ರೂ. ಮೀರಿರಬಾರದು.

ಅರ್ಜಿಯೊಂದಿಗೆ ತಹಶೀಲ್ದಾರ ನೀಡಿದ ಜಾತಿ ಮತ್ತು ಆದಾಯ ದೃಢೀಕರಣ ಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣ ಪತ್ರ, ಆಧಾರ ಕಾರ್ಡ್, ಹಿಂದಿನ ತರಗತಿಯ ಅಂಕಪಟ್ಟಿ ಹಾಗೂ ವಿದ್ಯಾರ್ಥಿಯ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 4 ಭಾವಚಿತ್ರಗಳು ಹಾಗೂ ಕಾಲೇಜು ಪ್ರವೇಶದ ಶುಲ್ಕ ಪ್ರತಿಯೊಂದಿಗೆ ನಿಗದಿ ಪಡಿಸಿದ ದಿನಾಂಕದೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನ ಅಜಾದ್ ಭವನ, ಕೊಪ್ಪಳ, ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಮತ್ತು ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಕುಷ್ಟಗಿ ಹಾಗೂ ಹತ್ತಿರದ ವಸತಿ ನಿಲಯಗಳಿಗೆ ಸಂಪರ್ಕಿಸಬಹುದು ಎಂದು ಕೊಪ್ಪಳ ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸರಕಾರಿ ಶಾಲೆಯಲ್ಲಿ ಕಲಿತ ಮಕ್ಕಳು ಬಲಿಷ್ಠರಾಗುತ್ತಾರೆ ತಹಶೀಲ್ದಾರ ಬಬಲಿ

**ಮೂಡಲಗಿ :** ಸರ್ಕಾರಿ ಶಾಲೆಯಲ್ಲಿ ಕಲಿಯುವಂತಹ ಮಕ್ಕಳಿಗೆ ಸರ್ಕಾರಿ ಸೌಲಭ್ಯಗಳು ಬಹಳ ಇವೆ. ಉತ್ತಮ ಶಿಕ್ಷಣದ ಜೊತೆಗೆ ಉಚಿತವಾಗಿ ಬಟ್ಟೆ, ಶೂ, ಪೌಷ್ಠಿಕ ಆಹಾರವನ್ನು ನೀಡುತ್ತಿದ್ದು ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳಿಸಬೇಕು ಎಂದು ತಹಶೀಲ್ದಾರ ಶಿವಾನಂದ ಬಬಲಿ ಹೇಳಿದರು.

ಶುಕ್ರವಾರ ಸರ್ಕಾರಿ ಕನ್ನಡ ಬಾಲಕರ ಮಾದರಿ ಶಾಲಾ ಪ್ರಾರಂಭೋತ್ಸವದಲ್ಲಿ ನೂರಾರು ಕನಸುಗಳನ್ನು ಹೊತ್ತು ಶಾಲೆಗಳತ್ತ ಹೆಜ್ಜೆ ಹಾಕುತ್ತಿರುವ ನಗರದ ಮಕ್ಕಳನ್ನು ಸಿಹಿ ಹಾಗೂ ಪುಷ್ಪ ನೀಡಿ ಸ್ವಾಗತಿಸಿ ಪೋಷಕರನ್ನು ಉದ್ದೇಶಿಸಿ ಮಾತನಾಡಿದರು. ಸರಕಾರಿ ಶಾಲೆಯಲ್ಲಿ ಕಲಿತ ಮಕ್ಕಳು ಸಾಮಾಜಿ–ಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಬಲಿಷ್ಠರಾಗುತ್ತಾರೆ ಎಂದರು.

ಶಿಶುಅಭಿವೃದ್ಧಿಅಧಿಕಾರಿಯಲ್ಲಪ್ಪಗದಾಡಿಮಾತನಾಡಿ, ಸರಕಾರಿ ಶಾಲೆಯಲ್ಲಿ ಕಲಿತ ಮಕ್ಕಳು ಜಗ್ಗತ್ತಿನಲ್ಲಿ ಹೇಗೆ ಬದುಕಬೇಕು ಎಂಬ ಜ್ಞಾನ ಹೊಂದುತ್ತಾರೆ.

ಖಾಸಗಿ ಶಾಲೆಯಲ್ಲಿ ಕಲಿತ ಮಕ್ಕಳು ಪುಸ್ತಕದ ಹುಳುವಾಗಿ ಬದುಕುತ್ತಾರೆ. ಇಲ್ಲಿ ಎಲ್ಲದಕ್ಕೂ ಮುಕ್ತವಾದ ಚರ್ಚೆಗಳು ಜರುಗುತ್ತವೆ ಎಂದ ಅವರು ಸರಕಾರಿ ಶಾಲೆಯಲ್ಲಿ ಕಲಿತ ಸಾಕಷ್ಟು ವಿದ್ಯಾರ್ಥಿಗಳು ಇಂದು ಸರ್ಕಾರದಲ್ಲಿ ಉನ್ನತ ಮಟ್ಟದ ಅಧಿಕಾ–ರಿಗಳಾಗಿದ್ದಾರೆ.

ಈ ಶಾಲೆಯು ಶತಮಾನ ಕಂಡ ಶಾಲೆಯಾಗಿದ್ದು ಮೂಲಭೂತ ಸೌಕರ್ಯಗಳನ್ನು ಅಧಿಕಾರಿಗಳು ನೀಡಬೇಕು ಎಂದರು.

ಪುರಸಭೆ ಮುಖ್ಯಾಧಿಕಾರಿ ತುಕಾರಾಮ ಮಾದರ ಮಾತನಾಡಿ, ಕನ್ನಡ ಶಾಲೆಯ ಶಿಕ್ಷಕರು ಶಾಲೆಗೆ ಬಣ್ಣ ಹಚ್ಚುವ ಬದಲು ವಿದ್ಯಾರ್ಥಿಗಳ ಜೀವನಲ್ಲಿ ವಿವಿಧ ಬಣ್ಣ ತುಂಬಿ, ಮಕ್ಕಳಿಗೆ ಶಿಕ್ಷಣದ ಜೊತೆಗೆ ದೈಹಿಕ, ಮಾನಸಿಕ ಹಾಗೂ ಧೈರ್ಯವಾಗಿ ಬಾಳುವಂತಹ ನೂತನ ತಂತ್ರಜ್ಞಾನದ ಅರಿವು ಮೂಡಿಸಬೇಕು. ಕ್ರೀಡೆಗಳಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಶಿಕ್ಷಕ–ರಿಗೆ ಹೇಳಿದರು.

ಪುರಸಭೆ ಆವರಣದಲ್ಲಿ ಶೃಂಗಾರಗೊಂಡ ಎತ್ತಿನ ಬಂಡಿಯಲ್ಲಿ ಶಾಲಾ ಮಕ್ಕಳನ್ನು ಕುಳ್ಳಿರಿಸಿ ಶಾಲೆಯವರೆಗೆ ಕರೆತರಲಾಯಿತು. ಶಾಲೆಯಲ್ಲಿ ಮಕ್ಕಳಿಗೆ ಪಠ್ಯ ಪುಸ್ತಕ ಹಾಗೂ ಬಟ್ಟೆಗಳನ್ನು ಅಧಿಕಾ–ರಿಗಳು ನೀಡಿದರು.

ತಾ.ಪಂ.ಇ. ಓ. ಫಕ್ಕೀರಪ್ಪ ಚಿನ್ನಣ್ಣವರ, ಬಿ. ಆರ್. ಸಿ. ರೇಣುಕಾಆಣಿ,ಕ್ಷೇತ್ರಶಿಕ್ಷಣಾಧಿಕಾರಿಕಾರ್ಯಾಲಯದ ರೇವಪ್ಪ ಯರಗಟ್ಟಿ, ದಲಿತ ಮುಖಂಡರಾದ ರಮೇಶ ಮಾದರ, ಮರೆಪ್ಪ ಮರೆಪ್ಪಗೋಳ, ಸಾಹಿತಿ ಬಾಲಶೇಖರ ಬಂದಿ, ಸಮಾಜ ಸೇವಕ ಈರಪ್ಪ ಢವಳೇಶ್ವರ, ಪುರಸಭೆ ಸದಸ್ಯರು, ಶಾಲೆಯ ಶಿಕ್ಷಕ ವೃಂದ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಪ್ರಭಾರಿ ಮುಖ್ಯೋಪಾಧ್ಯಾಯ ಸುರೇಶ ಕೋಪರ್ಡೆ ಸ್ವಾಗತಿಸಿ ವಂದಿಸಿದರು.

# ತುಕ್ಕಾನಟ್ಟಿ ಸರ್ಕಾರಿ ಶಾಲೆಯಲ್ಲಿ ಮಕ್ಕಳ ಕಲರವ

**ಮೂಡಲಗಿ :** ಬೇಸಿಗೆ ರಜೆ ಮುಗಿಸಿ ಶೈಕ್ಷಣಿಕ ಚಟುವಟಿಕೆ ಆರಂಭವಾಗುತ್ತಿರುವ ಪ್ರಾರಂಭೋತ್ಸವ ಕಾರ್ಯಕ್ರಮ ದಿನದಂದೇ ವಿದ್ಯಾರ್ಥಿಗಳು ತುಕ್ಕಾನಟ್ಟಿ ಸರಕಾರಿ ಮಾದರಿ ಶಾಲೆಯಲ್ಲಿ ಉತ್ಸಾಹದಿಂದ ಹಾಜರಾಗಿದ್ದಾರೆ. ಜನಪ್ರತಿನಿಧಿಗಳು ಹಾಗೂ ಶಿಕ್ಷಕರು ವಿದ್ಯಾರ್ಥಿಗಳಿಗೆ ಪುಷ್ಪ ಹಾಗೂ ಸಿಹಿ ನೀಡಿ ಸ್ವಾಗತಿಸಿದರು. ಮಕ್ಕಳು ಖುಷಿಯಿಂದ ಶಾಲೆಗೆ ಹಾಜರಾಗಿದ್ದಾರೆ ಎಂದು ಪ್ರಧಾನ ಗುರುಗಳಾದ ಎ. ವ್ಹಿ. ಗಿರೆಣ್ಣವರ ಹೇಳಿದರು.

ಶುಕ್ರವಾರ ಶಾಲಾ ಪ್ರಾರಂಭೋತ್ಸವದಲ್ಲಿ ಜನಪ್ರತಿನಿಧಿಗಳು ಹಾಗೂ ಶಿಕ್ಷಕರು ವಿದ್ಯಾರ್ಥಿಗಳಿಗೆ ಪುಷ್ಪ ಹಾಗೂ ಸಿಹಿ ನೀಡಿ ಸ್ವಾಗತಿಸಿಕೊಂಡು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಇಲಾಖೆಯಿಂದ ಉಚಿತವಾಗಿ ಬಂದ ಸಮವಸ್ತ್ರ, ಪಠ್ಯ ಪುಸ್ತಕ ವಿತರಿಸಲಾಯಿತು. ಈ ಸರ್ಕಾರಿ ಶಾಲೆಯಲ್ಲಿ 1 ರಿಂದ 8 ನೇ ತರಗತಿಯ ಸುಮಾರು 700 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ



ಓದುತ್ತಿದ್ದಾರೆ. ಈ ಶೈಕ್ಷಣಿಕ ವರ್ಷಾರಂಭ ದಿನದಂದೇ ಒಂದನೇ ತರಗತಿಗೆ 60 ಮಕ್ಕಳು ದಾಖಲಾಗಿದ್ದಾರೆ.

ಈಗಾಗಲೇ ಮಕ್ಕಳಿಗೆ ಬೇಸಿಗೆ ರಜೆಯಲ್ಲಿ ಬೇಸಿಗೆ ಶಿಬಿರ ಕೂಡ ನಡೆಸಲಾಗಿದ್ದು ಜನಪ್ರತಿನಿಧಿಗಳು ಹಾಗೂ ಗ್ರಾಮಸ್ಥರ ಸಹಕಾರದಿಂದ ಶಾಲೆಗೆ ಹೆಚ್ಚು ಮಕ್ಕಳು ದಾಖಲಾಗುತ್ತಿದ್ದಾರೆ. ದಾಖಲಾತಿಗೆ ಹಾಗೂ ಹಾಜರಾತಿಗೆ ಇಲಾಖೆಯ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಈ ಭಾಗದ ಶಾಸಕರ ಅಧಿಕಾರಿಗಳ ಶೈಕ್ಷಣಿಕ ಕಾರ್ಯ ವೈಖರಿಯೇ ಕಾರಣ ಎಂದು ಹೇಳಿದರು.

ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಗಾಯತ್ರಿ ಬಾಗೇವಾಡಿ, ಉಪಾಧ್ಯಕ್ಷೆ ಸುನಂದಾ ಭಜಂತ್ರಿ, ಮಾಜಿ ಅಧ್ಯಕ್ಷ ಕುಮಾರ ಮರ್ದಿ, ಯಲ್ಲವ್ವಾ ಬಿಳಿಗೌಡ್ರ, ಗ್ರಾಮ ಪಂಚಾಯತ್ ಸದಸ್ಯ ಸತ್ಯೆಪ್ಪಾ ಮಲ್ಲಾಪೂರ, ಮಂಜುನಾಥ ಗದಾಡಿ, ಕಲ್ಲೋಳಿ ಸಿ.ಆರ್.ಪಿ ಬಸವರಾಜ ಅಂಗಡಿ, ಶಿಕ್ಷಕರಾದ ವಿಮಲಾಕ್ಷಿ ತೋರಗಲ, ಸುಜಾತಾ ಕೋಳಿ,

ಪುಷ್ಪಾ ಭರಮಧೆ, ಲಕ್ಷ್ಮಿ ಹೆಬ್ಬಾಳ, ರೂಪಾ ಹೂಲಿಕಟ್ಟಿ, ವಾಸಂತಿ ಬೋರಗುಂಡಿ, ಪ್ರಿಯಾಂಕಡಿ.ಕೆ.,ಮಹಾದೇವಗೋಮಾಡಿ, ಸಿ.ಎಸ್. ಸೀರಿ, ಬಸವರಾಜ ನಾಯ್ಕ, ಸೋಮಶೇಖರ ವಾಯ್. ಆರ್., ಹೊಳೆಪ್ಪ ಗದಾಡಿ, ಪವಿತ್ರಾ ಬಡಿಗೇರ, ಅನ್ನಪೂರ್ಣಾ ಹುಲಕುಂದ, ಶಿವಲೀಲಾ ಹಣಮನ್ನವರ, ಯಮುನಾ ಹಮ್ಮನವರ, ಖಾತೂನಬಿ ನದಾಫ್ ಭಾಗವಹಿಸಿದ್ದರು.

# ಅಭಿವೃದ್ಧಿಗೆ ಶ್ರಮಿಸಿದ್ದ ಸಿದ್ದು ನ್ಯಾಮಗೌಡರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ

**ಜಮಖಂಡಿ :** ಮತಕ್ಷೇತ್ರದ ಅಭಿವೃದ್ಧಿ ಮತ್ತು ಜನಕಲ್ಯಾಣ ಸೇವೆಗಳಿಗೆ ಮತ್ತೊಂದು ಹೆಸರಾಗಿದ್ದ ಮಾಜಿ ಶಾಸಕ ದಿವಂಗತ ಸಿದ್ದು ನ್ಯಾಮಗೌಡರು ಶ್ರಮ ಜೀವಿಗಳಾಗಿದ್ದರು. ಅವರಅವಧಿಯಲ್ಲಿಕೈಗೊಂಡಿರುವಜನಪರ ಕಾರ್ಯಗಳು ಇಂದಿಗೂ ಜನಮಾನಸದಲ್ಲಿ ಹಚ್ಚು ಹಸಿರಾಗಿ ಉಳಿದುಕೊಂಡಿದೆ ಎಂದು ನಗರಸಭೆ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಸಿದ್ದು ಮೀಸಿ ಹೇಳಿದರು.

ನಗರದ ಜೋಳದ ಬಜಾರದಲ್ಲಿ ದಿ. ಸಿದ್ದು ನ್ಯಾಮಗೌಡರ ಏಳನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಮ್ಮ ರಾಜಕೀಯ ಜೀವನದಲ್ಲಿ ಜನಹಿತ, ಕ್ಷೇತ್ರದ ಹಿತವನ್ನು ಬಯಸಿದ್ದರು.

ಎಲ್ಲಸಮುದಾಯಮತ್ತುಎಲ್ಲಪಕ್ಷದವರನ್ನು ಒಂದುಗೂಡಿಸಿಕೊಂಡು ಕೆಲಸ ಮಾಡುವ ಅವರ ಶೈಲಿ ಬಹಳಷ್ಟು ಯಶಸ್ವಿಯಾಗಿ–



ತ್ತು. ಸುಂದರ ಮತ್ತು ಅಭಿವೃದ್ಧಿ ಹೊಂದಿದ ನಗರವನ್ನಾಗಿ ಪರಿವರ್ತಿಸಲು ಸಾಕಷ್ಟು ಶ್ರಮ ವಹಿಸಿ ಕೆಲಸ ಮಾಡಿದ್ದಾರೆ. ರೈತರಿಗೆ ನೀರಾವರಿ ಅನುಕೂಲಕ್ಕಾಗಿ ಶ್ರಮಬಿಂದು ಸಾಗರ, ಕಟ್ಟೆಕೆರೆ ಅಭಿವೃದ್ಧಿ ಮತ್ತು ಸಾರ್ವಜನಿಕರ ಅನುಕೂಲಕ್ಕೆ ನೂತನ ಬಸ್ ನಿಲ್ದಾಣ, ಬಸ್ ಡಿಪೋ, ಬಾಗಲಕೋಟ ವಿವಿ, ತಾಲೂಕ ಆಡಳಿತ ಭವನ, ನಗರಕ್ಕೆ ಎರಡು ಬೈಪಾಸ್ ರಸ್ತೆಗಳು ಹೀಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಮೂಲಕ ಜನಮಾನಸದಲ್ಲಿ ಧೀಮಂತ ನಾಯಕರಾಗಿ ಅಚ್ಚಳಿಯದೇ ಉಳಿದುಕೊಂಡಿದ್ದಾರೆ ಎಂದರು.

ಇದೇಸಂದರ್ಭದಲ್ಲಿದಿ.ಸಿದ್ದುನ್ಯಾಮಗೌಡರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಪ್ರಕಾಶ ಕಣಬೂರ, ಮೀರಾ ವಂಟಮುರಗಿ, ಭೀಮಸಿ ನಡುವಿನಮನಿ, ರೋಹಿತ ಸೂರ್ಯವಂಶಿ, ಗ್ರಾಮ ಪಂಚಾಯತ್ ಅಧ್ಯಕ್ಷ ಶಂಕರ ಕಾಂಬಳೆ, ಮಹೇಶ ಸಿಂಗೆ, ನವೀನ ಕಲೂತಿ, ಚನ್ನಪ್ಪ ಗವರೋಜಿ, ಲೋಕೇಶ ಜಮಖಂಡಿ ಸಹಿತ ಇನ್ನೂ ಹಲವರು ಉಪಸ್ಥಿತರಿದ್ದರು.

# ಅರ್ಜಿ ಸಲ್ಲಿಕೆ ದಿನಾಂಕ ವಿಸ್ತರಣೆ

**ಬಾಗಲಕೋಟೆ :** ಅಲ್ಪಸಂಖ್ಯಾತರ ಬಹು ವಲಯ ಅಭಿವೃದ್ಧಿ ಯೋಜನೆಯಡಿ (MSDP) ಜಿಲ್ಲೆಯಲ್ಲಿ ಪದವಿ, ಡಿಪ್ಲೋಮಾ, ಐಟಿಐ ಹಾಗೂ ಹಾಸ್ಟೇಲ್‌ಗಳಲ್ಲಿ ಓದುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸಾಫ್ಟ್ ಸ್ಕಿಲ್ ತರಬೇತಿಗಳನ್ನುನೀಡಲು ಯೋಜನೆ ರೂಪಿಸಲಾಗಿದೆ.

ಕೆರಿಯರ್ ಡೆವಲಪ್ಮೆಂಟ್ ಪ್ರೊಸೆಸ್, ಅಂಡಸ್ಟಾಂಡಿಂಗ್ ಕಮ್ಯೂನಿಕೇಶನ್, ಡೆವಲಪಿಂಗ್ ಥಿಂಕಿಂಗ್ ಸ್ಕಿಲ್ಸ್, ಎಂಪ್ಲಾಯ್ ಎಬಿಲಿಟಿ ಸ್ಕಿಲ್ಸ್, ಸ್ಪೋಕನ್ ಇಂಗ್ಲೀಷ್ ವಿಷಯಗಳಲ್ಲಿತರಬೇತಿಗಳನ್ನು ನೀಡಲು ಅನುಭವಿ ತರಬೇತಿದಾರ–ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪೂರ್ವದಲ್ಲಿ ನಿಗದಿಪಡಿಸಿದ್ದ ಮೇ 28ರ ಕೊನೆಯ ದಿನಾಂಕವನ್ನು ಮೇ 31, ರವರೆಗೆ ವಿಸ್ತರಿಸಲಾಗಿದೆ.

ಆಸಕ್ತರು ಅರ್ಜಿ ನಮೂನೆ ಪಡೆದು, ತಮ್ಮ ಅರ್ಜಿ ಮತ್ತು ದಾಖಲೆಗಳನ್ನು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ, ಕೊಠಡಿ ಸಂಖ್ಯೆ 118, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ ಕಚೇ–ರಿಗೆ ಖುದ್ದಾಗಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 08354–295210 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಲೆಗಳೇ ನಿಜವಾದ ದೇವಸ್ಥಾನಗಳು



**ಬನಹಟ್ಟಿ :** ಮಕ್ಕಳ ಸುಂದರವಾದ ಭವಿಷ್ಯ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಮತ್ತು ಪಾಲಕರ ಪಾತ್ರ ಬಹಳಷ್ಟು ಮಹತ್ವದ್ದಾಗಿದೆ. ಶಿಕ್ಷಕರು ತಮ್ಮ ಸಂಪೂರ್ಣವಾದ ಜ್ಞಾನವನ್ನು ಮಕ್ಕಳಿಗೆ ನೀಡಬೇಕು. ಕ್ಷೇತ್ರದ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ತಾನು ಸದಾ ಬದ್ಧನಾಗಿರುವೆ. ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ರಾಜಕೀಯ ಬೇಡ. ಶಾಲೆಗಳೇ ನಿಜವಾದ ದೇವಸ್ಥಾನಗಳು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಶುಕ್ರವಾರ ಇಲ್ಲಿನ ಪಿಎಂಶ್ರೀ ಕೆ. ಎಚ್. ಡಿ. ಸಿ. ಶಾಲೆಯಲ್ಲಿ ಹಮ್ಮಿಕೊಂಡ ತಾಲ್ಲೂಕು ಸರ್ಕಾರಿ ಶಾಲೆಗಳ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕ್ಷೇತ್ರಶಿಕ್ಷಣಾಧಿಕಾರಿಅಶೋಕಬಸಣ್ಣವರಮಾತನಾಡಿ, ಪಾಲಕರಲ್ಲಿ ಸರ್ಕಾರಿ ಶಾಲೆಗಳ ಬಗ್ಗೆ ತಾತ್ಸಾರ ಬೇಡ. ಸರ್ಕಾರಿ ಶಾಲೆಗಳಲ್ಲಿಯೂ ಕೂಡಾ ಗುಣಾತ್ಮಕ ಶಿಕ್ಷಣ ದೊರೆಯುತ್ತಿದೆ.

ಎನ್. ಎನ್. ಎಂ. ಎಸ್. ಪರೀಕ್ಷೆಯಲ್ಲಿ ತಾಲ್ಲೂಕಿನ 47 ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಿದ್ದಾರೆ.

ತಾಲ್ಲೂಕಿನಲ್ಲಿ ಎರಡು ಶಾಲೆಗಳು ಪ್ರಧಾನ ಮಂತ್ರಿ ಸಮೃದ್ಧಿ ಶಾಲೆಗಳು ಎಂದು ಆಯ್ಕೆಯಾಗಿವೆ. ಈ ಶಾಲೆಗಳಿಗೆ ಕೇಂದ್ರ ಸರ್ಕಾರ ಮೊದಲ ಕಂತಿನಲ್ಲಿ ರೂ. 4.32 ಲಕ್ಷ, ಎರಡನೆಯ ಕಂತಿನಲ್ಲಿ ರೂ. 3.72 ಲಕ್ಷ ಹಣವನ್ನು ನೀಡಿದ್ದು, ಶಾಲೆಗಳ ಅಭಿವೃದ್ಧಿಗೆ ಹಣವನ್ನು ಬಳಸಲಾಗುತ್ತಿದೆ. ತಾಲ್ಲೂಕಿನಲ್ಲಿರುವ ಶಿಥಿಲಾವಸ್ಥೆಯಲ್ಲಿರುವ ಶಾಲೆಗಳ ದುರಸ್ತಿಗೆ ಅನುದಾನದ ಅವಶ್ಯಕತೆ ಇದೆ ಎಂದು ಬಸಣ್ಣವರ ತಿಳಿಸಿದರು.

ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ, ಎಸ್ಡಿಎಂಸಿ ಅಧ್ಯಕ್ಷ ನಿಜಗುಣಿ ಅಮಟಿ, ಉಪಾಧ್ಯಕ್ಷ ಸದಾಶಿವ ಭಸ್ಮೆ, ಶಿವಾನಂದ ಬುದ್ನಿ, ವೀರಭದ್ರ ಕುಚನೂರ, ಮುಖ್ಯ ಶಿಕ್ಷಕ ಸಿ.ಎಚ್. ಬುದ್ನಿ, ಶಿಕ್ಷಕಿ ಶೈಲಾ ಮಿರ್ಜಿ, ಬಸವರಾಜ ಹನಗಂಡಿ, ಬಿ. ಡಿ. ನೇಮಗೌಡ, ಶಿವು ಯಾದವಾಡ, ಮಲ್ಲಿಕಾರ್ಜುನ ಗಡೆನ್ನವರ, ಸಿ.ಬಿ.ಜೈನಾಪುರ,ಅರ್ಜುನ ಕಾಖಂಡಕಿ, ಬಾಬಾಗೌಡ ಪಾಟೀಲ, ಪಿ. ಎಸ್. ನಂದೇಶ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

# ತಮಿಳು ನಟ ಕಮಲ್ ಹಾಸನ್ ಹೇಳಿಕೆಗೆ ಖಂಡನೆ

**ಮಹಾಲಿಂಗಪುರ :** ಸುಮಾರು 2500 ವರ್ಷಗಳ ಹಿಂದಿನ ಪ್ರಾಚೀನ ಇತಿಹಾಸವುಳ್ಳ ಕನ್ನಡ ಭಾಷೆಗೆ ಅವಮಾನಿಸಿದ ಕಮಲ್ ಹಾಸನ್ ಗೆ ನಮ್ಮ ಧಿಕ್ಕಾರವಿದೆ. ಅವರ ಅಭಿನಯದ 'ಥಗ್ ಲೈಫ್' ಚಿತ್ರವನ್ನು ಯಾವುದೇ ಕಾರಣಕ್ಕೂ ಕರ್ನಾಟಕ ರಾಜ್ಯದಲ್ಲಿ ಬಿಡುಗಡೆಗೆ ಅವಕಾಶ ನೀಡಬಾರದು ಎಂದು ಪುರಸಭೆ ಸದಸ್ಯ ರವಿ ಜವಳಗಿ ಖಂಡಿಸಿದರು.

ಗುರುವಾರ ಪತ್ರಿಕೆಯೊಂದಿಗೆ ಮಾತನಾಡಿದ ಅವರು ತಾಯಿ ಕನ್ನಡಾಂಬೆ ಯಾವುದೇ ಭಾಷೆ, ಮತ, ಪಂತ, ಧರ್ಮ ಬೇಧವಿಲ್ಲದೆ ಎಲ್ಲರಿಗೂ ಆಶ್ರಯ ಕೊಟ್ಟ ಮಹಾನ ತಾಯಿ ನಮ್ಮ ಕನ್ನಡಮ್ಮ. ಕರ್ನಾಟಕದ ಬೆಂಗಳೂರಲ್ಲಿ ಪ್ರತಿಶತ 25 ಕ್ಕಿಂತ ಜಾಸ್ತಿ ತಮಿಳಿಗರೇ ಇದ್ದಾರೆ.

ಅವರಿಗೆಲ್ಲ ಆಶ್ರಯ ಕೊಟ್ಟವಳು ಕನ್ನಡ ತಾಯಿ. ಅನೇಕ ತಮಿಳು ನಟ, ನಟಿಯರಿಗೆ ಅನ್ನ ಕೊಟ್ಟವಳು ಕನ್ನಡ ತಾಯಿ. ಇಷ್ಟೆಲ್ಲ ಇದ್ದರೂ ಕನ್ನಡಕ್ಕೆ ಅಪಮಾನ ಮಾಡಿದ ತಮಿಳು ನಟ ಕಮಲ್ ಹಾಸನ್ ಹೇಳಿಕೆಯನ್ನು ತೀವ್ರವಾಗಿ ಖಂಡಿಸುತ್ತೇನೆ. ಅವರು ಕ್ಷಮೆ ಕೇಳಬೇಕು ಎಂದರು.

ಪುರಸಭೆ ಸದಸ್ಯರಾದ ಪ್ರಲ್ಹಾದ ಸಣ್ಣಕ್ಕಿ, ಬಸವರಾಜ ಚಮಕೇರಿ, ಬಸವರಾಜ ಹಿಟ್ಟಿನಮಠ, ಮುಖಂಡರಾದ ಸತೀಶ ಜುಂಝುರವಾಡ, ಸುರೇಶ ಸಣ್ಣಕ್ಕಿ, ಚನ್ನಪ್ಪ ರಾಮೋಜಿ, ಮಹಾಲಿಂಗ ಮುದ್ದಾಪೂರ, ನಾರಾಯಣ ಜೋಷಿ, ವಿನೋದ ಸಿಂಪಿ, ಶಿವು ಹುಣಶ್ಯಾಳ ಸೇರಿದಂತೆ ಹಲವರು ತಮಿಳು ನಟ ಕಮಲಹಾಸನ್ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.

# ಮುಂದೆ ಏನಾದರೂ ಆಗು, ಇಂದು ಸುಶಿಕ್ಷಿತನಾಗು: ಪರಪ್ಪ ಬಿಳ್ಳೂರ



**ರಬಕವಿ :** ಕಲಿಕಾ ಸಮಯದಲ್ಲಿ ಕಲಿಕೆಯತ್ತ ಗಮನ ಹರಿಸುವ ಜೊತೆಗೆ ಮುಂದೆ ಯಾವುದೇ ಹುದ್ದೆಯ ಗುರಿ ಹೊಂದಿದ್ದರೂ ಇಂದು ಸುಶಿಕ್ಷಿತನಾಗುವುದು ಬಹು ಮುಖ್ಯವೆಂದು ಜ್ಞಾನೋದಯ ಶಿಕ್ಷಣ ಸಂಸ್ಥೆಯ ಹಿರಿಯ ನಿರ್ದೇಶಕ ಪರಪ್ಪ ಮಹಾದೇವಪ್ಪ ಬಿಳ್ಳೂರ ಹೇಳಿದರು.

ಶುಕ್ರವಾರದಂದು ಸಮೀಪದ ರಾಂಪುರದ ಜ್ಞಾನೋದಯ ಶಿಕ್ಷಣ ಸಂಸ್ಥೆಯ ಶಾಲಾ ಪ್ರಾರಂಭೋತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಯಾವುದೇ ಕೆಲಸ ಮೇಲು–ಕೀಳು ಎಂದಿಲ್ಲ. ನಿಮ್ಮ ಕಲಿಕಾ ಸಾಮರ್ಥ್ಯಕ್ಕನುಸಾರ ನಿಮ್ಮ ಕನಸುಗಳು ಸಾಕಾರಗೊಳ್ಳುತ್ತವೆ. ಎಲ್ಲರೂ ಐಎಎಸ್, ಐಪಿಎಸ್, ಇಂಜನೀಯರ್ ಮತ್ತು ವೈದ್ಯರೇ ಆಗಬೇಕೆಂದಿಲ್ಲ. ಬದಲಾಗಿ ಕಲಿಕಾ ಸಾಮರ್ಥ್ಯ ಕಡಿಮೆ ಇದ್ದವರು ನಿಮ್ಮ ಪಾರಂಪರಿಕ, ಕೌಟುಂಬಿಕ ಉದ್ಯೋಗಗಳನ್ನು ಮಾಡುವ ಜೊತೆಗೆ ಸಂತೃಪ್ತ ಮತ್ತು ಸುಖಿ ಜೀವನ ನಡೆಸಲು ಸಾಧ್ಯ. ಕೆಲಸಗಳಲ್ಲಿ ಭಕ್ತಿ ಶ್ರದ್ಧೆ ಇದ್ದರೆ ಯಶಸ್ಸು ಖಂಡಿತ ಸಾಧ್ಯ ಎಂದರು. ಚೇರಮನ್ ಬಾಲಚಂದ್ರ ಹೊಸಕೋಟಿ ಮಾತನಾಡಿ, ಕುಟುಂಬದ ಉದ್ಯೋಗಗಳನ್ನು ತಿರಸ್ಕ–ರಿಸಿದರೆ ಎಲ್ಲರೂ ತಿನ್ನಲು, ಧರಿಸಲು ಯಾರನ್ನು ಆಶ್ರಯಿಸಬೇಕು? ಯಾವ ಕೆಲಸಗಳನ್ನು ನಿಕೃಷ್ಟವಾಗಿ ಕಾಣದೇ ಶ್ರದ್ಧೆಯಿಂದ ಮಾಡುವ ಮನಸ್ಸಿರಬೇಕು. ಕಲಿಕಾ ಹಂತದಲ್ಲಿ ನಿಷ್ಠೆಯಿಂದ ಅಭ್ಯಸಿಸಿದರೆ ನೀವು ಕಂಡ ಕನಸು ನನಸಾಗುತ್ತದೆಂದರು.

ಕೃಷ್ಣಾ ತಳವಾರ ಸ್ವಾಗತಿಸಿದರು. ಶಂಕ್ರಮ್ಮ ಮೈತ್ರಿ ನಿರೂಪಿಸಿದರು. ಮುನೀರ್ ಚಾಕನವರ ವಂದಿಸಿದರು. ಈ ಸಂದರ್ಭದಲ್ಲಿ ಚಂದ್ರಕಾಂತ ತೆಳಗಿನಮನಿ, ವಿವೇಕಾನಂದ ಭಸ್ಮೆ, ಸುರೇಶ ಗೊಲಭಾಂವಿ, ಸದಾಶಿವ ಅಮ್ಮಲಜೇರಿ, ಬಸವರಾಜ ಬರಗಿ, ಗಂಗಾರಾಮ ಕೊಡತೆ, ಆಡಳಿತಾಧಿಕಾರಿ ಏಕನಾಥ ಗಂಥಡೆ, ಮುಖ್ಯ ಗುರು ಕೃಷ್ಣಾ ತಳವಾರ, ಮಲ್ಲಿಕಾರ್ಜುನ ಮನ್ನಿ, ಸಾಬು ಬುಗುಟಿ, ಜಿಗಜಿನ್ನಿ ಸೇರಿದಂತೆ ಇನ್ನಿತರ ಸಿಬ್ಬಂದಿಗಳಿದ್ದರು.

# ಶಾಲಾ ಮಕ್ಕಳೊಂದಿಗೆ ಬಿಸಿಯೂಟ ಸವಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**ಕೊಪ್ಪಳ :** ಮಂಗಳೂರು ಗ್ರಾಮ ಪಂಚಾಯತಿ ರೇವಣಕಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಮ್ ಪಾಂಡೆ ಭೇಟಿ ನೀಡಿ ಮೂಲಭೂತ ಸೌಕರ್ಯ ಕಲ್ಪಿಸಲು ಪಿ.ಡಿ.ಓ ರವರಿಗೆ ಸೂಚನೆ*

*ಶಾಲಾ ಮಕ್ಕಳೊಂದಿಗೆ ಬಿಸಿಯೂಟ ಸವಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು*

ಕೊಪ್ಪಳ ಜಿಲ್ಲೆಯ: ಕುಕನೂರ ತಾಲೂಕಿನ ಮಂಗಳೂರು ಗ್ರಾಮ ಪಂಚಾಯತಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಮ್ ಪಾಂಡೆ ಭೇಟಿ. ರೇವಣಕಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮೂಲಭೂತ ಸೌಕರ್ಯಗಳಾದ ಶೌಚಾಲಯ, ಆಟದ ಮೈದಾನ, ಕಂಪೌಂಡ್, ಅಡುಗೆ ಕೋಣೆಗಳನ್ನು ಶೀಘ್ರವಾಗಿ ಮಾಡಲು ಪಿ.ಡಿ.ಓ ರವರಿಗೆ ಸೂಚನೆ ನೀಡಿದರು.

ಮಂಗಳೂರ ಗ್ರಾಮದ ಸರ್ಕಾರಿ ಹಿರಿಯ



ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಸ್ಥಳದಲ್ಲಿ ಮಾನ್ಯ ಕಾರ್ಯನಿರ್ವಾಹಕ ಬಿಸಿಯೂಟ ಕಾರ್ಯಕ್ರಮ ಸಮರ್ಪಕವಾಗಿ ಜಾರಿಗೊಳಿಸಲು ಎಸ್.ಡಿ.ಎಮ್.ಸಿ ಸದಸ್ಯರ ಪಾತ್ರ ಮಹತ್ವವಾಗಿದೆ. ಮಕ್ಕಳ ಹಾಜರಾತಿ ಹೆಚ್ಚಿಸುವುದು, ಪಾಲಕರ ಸಭೆಗಳು, ಮಕ್ಕಳ ಗ್ರಾಮ ಸಭೆಗಳು ಸರಿಯಾಗಿ ಜರುಗಬೇಕು ಎಂದರು. *ನಂತರ ಮಕ್ಕಳೊಂದಿಗೆ ಕುಳಿತು ಬಿಸಿಯೂಟ ಸೇವಿಸಿದರು.*

ವಸತಿ ಯೋಜನೆಯಡಿ ಪ್ರಾರಂಭಗೊಂಡ ಮನೆಗಳು, ಎಎಐ ಕಾಮಗಾರಿಗಳು, ಬಸ್ ಸ್ಟ್ಯಾಂಡ್ ಗಳನ್ನು ವೀಕ್ಷಣೆ ಮಾಡಿದರು.

ಅಧಿಕಾರಿಗಳಾದ ಸಂತೋಷ ಬಿರಾದರ್ ಪಾಟೀಲ್, ಬಿ.ಇ.ಯೋ ರವರು, ಗ್ರಾಮೀಣ ಕುಡಿಯೋ ನೀರು ಕಾರ್ಯಪಾಲಕ ಎ.ಇ.ಇ ರಿಜವಾನ್, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ನೀಲಂ ಚಳಗೇರಿ, ಗ್ರಾಮ ಪಂಚಾಯತಿ ಅಧ್ಯಕ್ಷರಾದ ಸಕ್ರಪ್ಪ ಚಿನ್ನೂರ, ಗ್ರಾಮ ಪಂಚಾಯತಿ ಉಪಾಧ್ಯಕ್ಷರು, ಸದಸ್ಯರು, ಶಾಲಾ ಶಿಕ್ಷಕರು ಬಳಗದವರು ಎಲ್ಲಾ ಊರಿನ ಮುಖಂಡರು ಯುವಕ ಮಿತ್ರರು ಮಹಿಳೆಯರು ಮುದ್ದು ಮಕ್ಕಳು ಮತ್ತು ಗ್ರಾಮಸ್ಥರು ಹಾಜರಿದ್ದರು.



# ಶ್ರೀ ಬನಶಂಕರಿದೇವಿ ತೊಟ್ಟಿಲು ಕಾರ್ಯಕ್ರಮ



**ಚಿಮ್ಮಡ:** ಗ್ರಾಮದ ಶ್ರೀ ಬನಶಂಕರಿದೇವಿ ದೇವಸ್ಥಾನದಲ್ಲಿ ದೇವಿಯ ಹುಟ್ಟುಹಬ್ಬದ ನಿಮಿತ್ಯವಾಗಿ ಸಾಂಪ್ರದಾಯಿಕ ತೊಟ್ಟಿಲು ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ವಿವಿಧ ಸಂಘಟನೆಗಳ ಸದಸ್ಯೆಯರು, ಸಮಾಜದ ಪ್ರಮುಖರು, ದೇವಿಯ ಆರಾಧಕರು ಸೇರಿ ನಡೆಸಲಾದ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಸದಸ್ಯೆ ಆಶಾ ಧಡೂತಿ, ಅನುರಾಧಾ ಕರಡಿ, ಸರೋಜಾ ಜಾಡಗೌಡ, ಭಾರತಿ ವಿಜಾಪೂರ, ಸವಿತಾ ಕರಡಿ, ತೇಜಸ್ವಿನಿ ಕರಡಿ, ಸುಜಾತಾ ಧಡೂತಿ, ಶಾಖಾಂಬರಿ ಕರಡಿ, ಅನ್ನಪೂರ್ಣ ಧಡೂತಿ, ಗಂಗವ್ವ ಕಾರಜಿನ್ನಿ, ವೇದಾ ಕರಡಿ, ಭೂಮಿಕಾ ಕರಡಿ ಸೇರಿದಂತೆ ಹಲವಾರು ಮಹಿಳಾ ಆರಾಧಕರು ಉಪಸ್ಥಿತರಿದ್ದರು.

# ವಿದ್ಯೆಯಿಂದ ಬದುಕು ಬೆಳಗಲು ಸಾಧ್ಯ



**ಇಂಡಿ :** ಮಕ್ಕಳು ಉತ್ತಮ ನಾಗರಿಕರಾಗಿ ರೂಪುಗೊಳ್ಳಲು ತಳಪಾಯದಲ್ಲಿಯೇ ಉತ್ತಮ ಶಿಕ್ಷಣ ಕೊಡಿಸಬೇಕು.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರನೀಡಿದಾಗಮಕ್ಕಳಭವಿಷ್ಯಉಜ್ವಲವಾಗುತ್ತದೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಬುಧವಾರದಂದು ತಾಲೂಕಿನ ಹಿರೇರೂಗಿ ಗ್ರಾಮದಲ್ಲಿ ಜಟ್ಟಿಂಗೇಶ್ವರ ಕೋಚಿಂಗ್ ಕ್ಲಾಸಿನ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಅವರು ಮಾತನಾಡಿದರು.

ವಿದ್ಯೆಯೇ ನಮ್ಮ ಬಾಳಿನ ಬೆಳಕು, ವಿದ್ಯೆಯಿಂದ ಬದುಕು ಬೆಳಗಲು ಸಾಧ್ಯ. ಪ್ರತಿಯೊಬ್ಬರೂ ವಿದ್ಯಾಭ್ಯಾಸವನ್ನು ಚೆನ್ನಾಗಿ ಪಡೆದು, ಮುಂದಿನ ಜೀವನ ಸುಂದರಗೊಳಿಸಿಕೊಳ್ಳಬೇಕು ಎಂದು ಹೇಳಿದರು.

ಪ್ರೌಢ ಶಾಲಾ ಶಿಕ್ಷಕ ರವಿ ಗಿಣ್ಣಿ ಮಾತನಾಡಿ, ಅಡುಗೆ ಹಾಳಾದರೆ ಒಂದು ದಿನ ನಷ್ಟ, ಬೆಳೆ ಹಾಳಾದರೆ ಒಂದು ವರ್ಷ ನಷ್ಟ. ಆದರೆ ವಿದ್ಯಾಭ್ಯಾಸ ಹಾಳಾದರೆ ಇಡೀ ಬದುಕೇ ನಷ್ಟವಾಗುತ್ತದೆ. ವಿದ್ಯಾರ್ಥಿ ಜೀವನ ಬಂಗಾರದಂತ ಜೀವನ.

ಹಾಗಾಗಿ ವಿದ್ಯಾರ್ಥಿಗಳು ಉತ್ತಮ ಸಂಸ್ಕಾರ, ಪರಿಶ್ರಮದಿಂದ ಚೆನ್ನಾಗಿ ಓದಿ, ಬದುಕನ್ನು ಸುಂದರವಾಗಿ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಜಟ್ಟಪ್ಪ ಸಾಲೋಟಗಿ ಮಾತನಾಡಿ, ಮಕ್ಕಳನ್ನು ಸುಸಂಸ್ಕೃತಮತ್ತುಸಚ್ಚಾರಿತ್ರ್ಯವುಳ್ಳಪ್ರಜೆಗಳನ್ನಾಗಿಸುವ ಮೂಲಕ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವ ನಿಟ್ಟಿನಲ್ಲಿ ಎಲ್ಲ ಪೂರಕ ಕಾರ್ಯಗಳನ್ನು ಪಾಲಕ ಪೆಣಟಿಜಜಜಿಟಿಜಜ?ಷಕರು ಮಾಡಬೇಕಿದೆ ಎಂದರು. ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೋಭಾ ಗಿಣ್ಣಿ–ಪ್ರಥಮ, ಸವಿತಾ ಮರಬಾದ–ದ್ವಿತೀಯ, ಕೀರ್ತಿ ಪರಗೊಂಡ–ತೃತೀಯ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಲಕ್ಷ್ಮೀ ಜೇವೂರ–ಪ್ರಥಮ, ಐಶ್ವರ್ಯ ಪೂಜಾರಿ–ದ್ವಿತೀಯ, ಸ್ನೇಹಾ ಶಿರಕನಹಳ್ಳಿ–ತೃತೀಯ ಸ್ಥಾನ ಪಡೆದು ಗ್ರಾಮದ ಕೀರ್ತಿ ಹೆಚ್ಚಿಸಿದ ಮಕ್ಕಳನ್ನು ಸನ್ಮಾನಿಸಲಾಯಿತು.

ಮಲ್ಲಪ್ಪ ಪೂಜಾರಿ ಹಾಗೂ ಬೀರಣ್ಣ ಪೂಜಾರಿ ಜ್ಯೋತಿ ಬೆಳಗಿಸಿದರು. ಮಾಳಪ್ಪ ಪೂಜಾರಿ ನೇತೃತ್ವ ವಹಿಸಿದ್ದರು. ಜಟ್ಟೆಪ್ಪ ಮಾವಿನಹಳ್ಳಿ, ಲಕ್ಷ್ಮಣ ಪೂಜಾರಿ, ಜಟ್ಟೆಪ್ಪ ಪೂಜಾರಿ, ನಿಂಗಪ್ಪ ಪೂಜಾರಿ, ಶ್ರೀಶೈಲ ಗುನ್ನಾಪುರ, ಶರಣಪ್ಪ ಪೂಜಾರಿ, ಜಟ್ಟಪ್ಪ ಝುಳಕಿ, ಶರಣಪ್ಪ ದಳವಾಯಿ,

ಸುದರ್ಶನ ಬೇನೂರ, ಜಟಿಂಗರಾಯ ಮರಡಿ, ಗಜೇಶ್ವರ ಗಿಣ್ಣಿ, ಭೀರಪ್ಪ ಹೊನ್ನಳ್ಳಿ, ಸಿಂಧೂರ ಪೂಜಾರಿ, ಮಾಳಪ್ಪ ನಿಂಬಾಳ ಹಾಗೂ ಶಿಕ್ಷಕರಾದ ಡಿ ಎಸ್ ಹಿರೇಕುರಬರ, ಎ ಎಂ ಝುಳಕಿ, ವ್ಹಿ ಡಿ ಗಿಣ್ಣಿ, ಆರ್ ಬಿ ಝುಳಕಿ, ಪ್ರಜ್ವಲ ಕುಲಕರ್ಣಿ ಸೇರಿದಂತೆ ಮಕ್ಕಳು, ಪಾಲಕರು, ತಾಯಂದಿರು ಭಾಗವಹಿಸಿದ್ದರು.

# ತಾಯಿ ದೇವರಾಗಬಹುದು, ದೇವರು ತಾಯಿಯಾಗಲಾರ: ಶಿಕ್ಷಕಿ ನಾಡಗೌಡ

**ತಾಳಿಕೋಟೆ :** ವಿದ್ಯಾರ್ಥಿ ಸ್ಥಾನಮಾನ ಹೊಂದಿದವರು ತಂದೆ ತಾಯಿಯವರನ್ನು ದೇವರೆಂದು ಕಾಣಿರಿ ಅದರಂತೆ ಕಲಿಸಿದ ಗುರುವನ್ನು ಹಾಗೂ ಗುರುವಿನ ಸ್ಥಾನಮಾನವನ್ನು ಅಲಂಕರಿಸಿದಂತಹ ಮಹಾ ಯೋಗಿ ಅವರ ಹಿತನುಡಿಗಳನ್ನು ಆಲಿಸಿ ಪಾಲಿಸಿದರೆ ಮುಂದೊಂದು ದಿನ ವಿದ್ಯಾರ್ಥಿಯಾದವರು ಉನ್ನತ ಸ್ಥಾನಮಾನ ಪಡೆದು ತಮ್ಮ ಜೀವನದಲ್ಲಿ ಬೇಕಾದುದ್ದನ್ನು ಸಾದಿಸಬಹುದಾಗಿದೆ ಎಂದು ಬಳಗಾನೂರ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾದ ಶ್ರೀಮತಿ ಮಡಿವಾಳಮ್ಮ ನಾಡಗೌಡ ಅವರು ನುಡಿದರು.



ಇತ್ತೀಚಗೆ ಪಟ್ಟಣದಲ್ಲಿ ಸ್ಪೂರ್ತಿ ಕೋಚಿಂಗ್ ಕ್ಲಾಸಿಸ್‌ಬೇಸಿಗೆತರಬೇತಿಶಿಬಿರದಮುಕ್ತಾಯ ಸಮಾರಂಭದಲ್ಲಿ ಏರ್ಪಡಿಸಲಾದ ಅಮ್ಮನಿಗೊಂದು ನಮನ ಎಂಬ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಸ್ಥಾನ ಅಲಂಕರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದ ಅವರು ಶಿಕ್ಷಣವೆಂದರೆ ಜ್ಞಾನ ಕೌಶ್ಯಲ್ಯ ಮತ್ತು ಒಂದು ಗುಂಪಿನ ಪದ್ದತಿಯಲ್ಲಿ ಭೋದನೆ ಮಾಡುವದಾಗಿದ್ದು ಇದಕ್ಕೆ ತರಬೇತಿ ಶಿಕ್ಷಣವೆನ್ನಲಾಗುತ್ತಿದೆ ಎಂದರು. ಶಿಕ್ಷಣವು ಸಾಮಾನ್ಯವಾಗಿ ಪ್ರಾಥಮಿಕ, ಮಾಧ್ಯಮಿಕ ಹಂತ ನಂತರ ಕಾಲೇಜು ವಿಶ್ವ ವಿದ್ಯಾಲಯಗಳಲ್ಲಿ ಶಿಷ್ಯ ವೃತ್ತಿ ಎಂದು ವಿಂಗಡಿಸಲಾಗುತ್ತಿರುವದರಲ್ಲಿ ಪಡೆಯುತ್ತಿರುವ ಶಿಕ್ಷಣ ಒಳ್ಳೆಯ ಮಾರ್ಗದತ್ತ ಕೊಂಡೊಯುತ್ತದೆ ಅಂತಹ ಒಳ್ಳೆಯ ಮಾರ್ಗದತ್ತ ವಿದ್ಯಾರ್ಥಿಗಳನ್ನು ಕೊಂಡೊಯುವ ಕಾರ್ಯ ತಾಳಿಕೋಟೆಯ ಸ್ಪೂರ್ತಿ ಶಿಕ್ಷಣ ಕ್ಲಾಸಿಸ್‌ನಲ್ಲಿ ನಡೆಯುತ್ತಿರುವದರಿಂದ ವಿದ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗದರ್ಶನಕ್ಕೆ ಅನುಕೂಲವಾಗಿದೆ ಪ್ರತಿವರ್ಷ ಈ ಸಂಸ್ಥೆಯಡಿಯಲ್ಲಿ ಶಿಕ್ಷಣ ಪಡೆದು ಹೆಚ್ಚಿನ ಅಂಕ ಗಳಿಸುವದರೊಂದಿಗೆ ವಿದ್ಯಾರ್ಥಿಗಳು ಸನ್ಮಾನಿಸಿ ಗೌರವಿಸಿಕೊಳ್ಳುತ್ತಿರುವದು ಸಂತಸದ ಸಂಗತಿಯಾಗಿದೆ ಎಂದರು.

ಇನ್ನೋರ್ವ ಅತಿಥಿ ಶ್ರೀ ಖಾಸ್ಗತೇಶ್ವರ ಮಠದ ಉಸ್ತುವಾರಿ ವೇ.ಮುರುಘೇಶ ವಿರಕ್ತಮಠ ಅವರು ಮಾತನಾಡಿ ಇಂದಿನ ಕಾರ್ಯಕ್ರಮ ನೊಡಿದರೆ ವಿದ್ಯಾಬುದ್ದಿಯನ್ನು ನೀಡುವಂತಹದ್ದಾಗಿದೆ ಹಾಗೂ ಒಳ್ಳೆಯ ಸಂಸ್ಕಾರವನ್ನೂ ಸಹ ನೀಡಲಾಗುತ್ತಿದೆ ಎಂಬುದು ಅನಿಸದೇ ಇರಲಾರದು ವಿದ್ಯಾರ್ಥಿಗಳು ಶಿಕ್ಷಣ ಪಡೆದು ಹೆಚ್ಚಿನ ಅಂಕ ಪಡೆದು ಪ್ರತಿವರ್ಷ ಈ ಸಂಸ್ಥೆಯಲ್ಲಿ ಸನ್ಮಾನಿಸಿಕೊಳ್ಳುತ್ತಾ ಸಾಗಿರುವದು ಹರ್ಷದಾಯಕ ಸಂಗತಿಯಾಗಿದೆ ಈ ಸಂಸ್ಥೆಯ ಸಂಚಾಲಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಕುಮಾರಿ ಶ್ವೇತಾ ಯರಗಲ್ಲ ಅವರ ಕಾರ್ಯ ಮಹತ್ವದ್ದಾಗಿದೆ ಎಂಬುದು ಎದ್ದು ಕಾಣುತ್ತಲಿದೆ ಶಿಕ್ಷಣ ಕ್ಷೇತ್ರದಲ್ಲಿ ಏಷ್ಟು ಕಲಿತರೂ ಕಡಿಮೆ ಶ್ರದ್ದೆ, ಪರಿಶ್ರಮ ಎಂಬುದು ವಿದ್ಯಾರ್ಥಿಗಳಲ್ಲಿ ಬರಬೇಕು ಅಂದರೆ ವಿದ್ಯೆದ ಒಲುಮೆಯಾಗಲಿದೆ ಎಂದರು.

ದಿವ್ಯ ಸಾನಿದ್ಯ ವಹಿಸಿ ದೀಪ ಬೆಳಗಿಸುವದರೊಂದಿಗೆ ಕಾರ್ಯಕ್ರಮ ಉದ್ಘಾಟಿಸಿದ ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರು ಆಶೀರ್ವಚನ ವಿಯುತ್ತಾ ವಿದ್ಯಾರ್ಥಿ ಸ್ಥಾನ ಮಾನ ಹೊಂದಿದವರು ಮಾತಾಪಿತರ ಹೆಸರು ತರುವಂತಹ ಕಾರ್ಯ ಮಾಡಬೇಕು ಅವರು ಯಾವ ರೀತಿ ವಿದ್ಯಾಭ್ಯಾಸಕ್ಕಾಗಿ ತಮ್ಮ ದುಡಿಮೆಯಿಂದ ಹಣ ನೀಡಿ ಮಕ್ಕಳಿಗಾಗಿ ಶ್ರಮಿಸುತ್ತಾರೆಂಬುದನ್ನು ವಿದ್ಯಾರ್ಥಿಯಾದವನು ಅರ್ಥೈಸಿಕೊಳ್ಳಬೇಕೆಂದು ಹೇಳಿದ ಶ್ರೀಗಳು ಪ್ರತಿವರ್ಷತಾಳಿಕೋಟೆಯಲ್ಲಿಜರುಗಲಿರುವ ಶ್ರೀ ಖಾಸ್ಗತೇಶ್ವರ ಜಾತ್ರೋತ್ಸವಕ್ಕೆ ಎಲ್ಲರೂ ಬನ್ನಿ ನಮಗೆ ಏನು ಕೊಡುವದು ಬೇಡಾ ನೀವು ಕಲಿಯುತ್ತಿರುವ ಶಿಕ್ಷಣದಲ್ಲಿ ಹೆಚ್ಚಿನ ಅಂಕ ಬಂದಿದೆ ಅಂದರೆ ಸಾಕು ಎಂದು ಹೇಳಿದ ಶ್ರೀಗಳು ವಿದ್ಯಾರ್ಥಿಗಳು ನಿಮ್ಮ ಕಾಲುಮೇಲೆನೀವುನಿಲ್ಲುವಂತಾಗಿರಿಸಾಧನೆ ಎಂಬುದು ಬಹು ಮುಖ್ಯ ಒಳ್ಳೆಯ ಸಾಧನೆ ಮಾಡಿ ನಿಮ್ಮ ಏಳಿಗೆಯನ್ನು ಮಾಡಿಕೊಳ್ಳಿರಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಸಂಚಾಲಕಿ ಕು.ಶ್ವೇತಾ ಯರಗಲ್ಲ ಅವರು ಪ್ರಾಸ್ತಾವಿಕ ಮಾತನಾಡಿದರು.

ಇನ್ನೋರ್ವ ಪುರಸಭಾ ಸದಸ್ಯರಾದ ಜೈಸಿಂಗ್ ಮೂಲಿಮನಿ ಅವರು ವಿದ್ಯಾರ್ಥಿಯಾದವನು ಯಾವ ರೀತಿ ಸಾಧನೆ ಮಾಡಿದರೆ ವಿದ್ಯೆ ಎಂಬುದು ಒಲಿಯುತ್ತದೆ ಎಂಬುದರ ಕುರಿತು ಇತ್ತೀಚಗೆ ತಮ್ಮ ಪುತ್ರ ಎಸ್.ಎಸ್.ಎಲ್.ಸಿ. ಪರಿಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ 5ನೇ ರ್‍ಯಾಂಕ್ ಪಡೆದುಕೊಂಡಿರುವ ಕುರಿತು ವಿವರಿಸಿದರು.

ಇದೇ ಸಮಯದಲ್ಲಿ ಎಸ್‌ಎಸ್–ಎಲ್‌ಸಿ ಪರಿಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ಗಗನಸಿಂಗ್ ಮೂಲಿಮನಿ, ಕವಿತಾ ಚೌದ್ರಿ, ಸುವರ್ಣಾ ಮುದ್ನೂರ, ವಿಜಯಲಕ್ಷ್ಮಿ ?ಮೇ ಕಡಕಲ್ಲ, ಸನ್ಮಾನಿಸಿ ಗೌರವಿಸಲಾಯಿತು.

ಸಂಸ್ಥೆಯ ಸಂಚಾಲಕರಾದ ಸಿದ್ದಾರೂಡ ಮದರಿ ಅವರು ಅದ್ಯಕ್ಷತೆ ವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಮಾತೆಯರ ಉಡಿ ತುಂಬುವ ಕಾರ್ಯಕ್ರಮ ನೆರವೇರಿಸಲಾಯಿತಲ್ಲದೇ ವಿದ್ಯಾರ್ಥಿಗಳು ಗುರುಗಳ ಹಾಗೂ ಮಾತಾಪಿತರ ಪಾದ ಪೂಜೆಗೈಯುವದರೊಂದಿಗೆ ಆಶಿರ್ವಾದ ಪಡೆದರು.

ಈ ಸಮಯದಲ್ಲಿ ಶ್ರೀಮತಿ ಶಾಂತಾ ಮದರಿ, ಸಿರಿನ್ ಚೌದ್ರಿ, ಮಹಾಂತೇಶ ಬಸರಕೊಡ, ಪೃಥ್ವಿ ಹೆಗಡೆ, ಶಿಕ್ಷಕ ವಿನೋದ ಚಿಕ್ಕಮಠ, ಒಳಗೊಂಡು ಸುಮಾರು 150ಕ್ಕೂ ಮೇಲ್ಪಟ್ಟು ವಿದ್ಯಾರ್ಥಿಗಳು ಹಾಗೂ ಅವರ ಪಾಲಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ವಿದ್ಯಾ ಕವಿತಾಳ ನಿರೂಪಿಸಿ ವಂದಿಸಿದರು.

# ಕಟ್ಟಡ ಕಾರ್ಮಿಕರ ಟ್ರೇಡ್ ಯುನಿಯನ್‌ಗೆ ಜಿಲ್ಲಾಧ್ಯಕ್ಷರಾಗಿ ಜಾಧವ ನೇಮಕ

**ವಿಜಯಪುರ:** ಕರ್ನಾಟಕ ಜನಶಕ್ತಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಟ್ರೇಡ್ ಯೂನಿಯನ್ ರಾಜ್ಯ ಕಮಿಟಿಯ ಆದೇಶದ ಮೇರೆಗೆ ರವೀಂದ್ರ ಜಾಧವ ಅವರನ್ನು ವಿಜಯಪುರ ಜಿಲ್ಲೆಯ ಜಿಲ್ಲಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.



ಮಲ್ಲಿಕಾರ್ಜುನ ನಾಗಪ್ಪ ನಾಯ್ಕೋಡಿ ಅವರನ್ನು ವಿಜಯಪುರ ಜಿಲ್ಲೆಯ ಪ್ರಧಾನ ಕಾರ್ಯದರ್ಶಿಯನ್ನಾಗಿ ಇದೇ ವೇಳೆ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ರಾಜ್ಯಾಧ್ಯಕ್ಷ ಎಂ. ನಾಗರಾಜ್ ಅವಧ್ಯೀ ಆದೇಶ ಹೊರಡಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಸರ್ಕಾರದ ವೈಫಲ್ಯಗಳನ್ನು ಟೀಕಿಸುವುದು ಸಂವಿಧಾನ ಬದ್ಧ ಹಕ್ಕು: ಆಲಗೂರ

**ವಿಜಯಪುರ :** ಬಿಜೆಪಿ ಯುವ ದಲಿತ ನಾಯಕನ ವಿರುದ್ಧ ಇನ್ನೋರ್ವ ದಲಿತ ನಾಯಕನನ್ನು ಎತ್ತಿ ಕಟ್ಟುವ ಷಡ್ಯಂತ್ರವನ್ನು ಬಿಜೆಪಿ ಬಿಡಬೇಕು ಎಂದು ಮಾಜಿ ಶಾಸಕ ರಾಜು ಆಲಗೂರ ಹೇಳಿದರು.

ನಗರದಲ್ಲಿಬುಧವಾರಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮೋದಿ ಅವರು ದೇಶದ ಪ್ರಧಾನಿ, ಅವರನ್ನು ಪ್ರಶ್ನೆ ಮಾಡುವುದು ಪ್ರತಿಯೊಬ್ಬ ನಾಗರಿಕನ ಹಕ್ಕು, ಹೀಗಾಗಿ ಸಚಿವ ಪ್ರಿಯಾಂಕ್ ಖರ್ಗೆ ಮೋದಿಜಿ ಅವರನ್ನು ಪ್ರಶ್ನೆ ಮಾಡುತ್ತಿದ್ದಾರೆ, ಸಚಿವರಾಗಿರುವ ಪ್ರಿಯಾಂಕ್ ಖರ್ಗೆ ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಟೀಕಿಸುತ್ತಿದ್ದಾರೆ, ಇದರಲ್ಲಿ ತಪ್ಪೇನು? ಸರ್ಕಾರದ ವೈಫಲ್ಯಗಳನ್ನು ಟೀಕಿಸುವುದು ಸಂವಿಧಾನ ಬದ್ಧವಾದ ಹಕ್ಕು, ಆದರೆ ಇದನ್ನು ಸಹಿಸಿಕೊಳ್ಳದೇ ಬಿಜೆಪಿ ನಾಯಕರು ದಲಿತ ನಾಯಕರ ವಿರುದ್ಧ ದಲಿತ ನಾಯಕರನ್ನೇ ಎತ್ತಿ ಕಟ್ಟಿ ಮೋಜು ನೋಡುತ್ತಿದ್ದಾರೆ ಎಂದರು.

ಛಲವಾದಿ ನಾರಾಯಣಸ್ವಾಮಿ ಈ ಹಿಂದೆ ಖರ್ಗೆ ಸಾಹೇಬರ ಮನೆ ಬಾಗಿಲು ಕಾಯುತ್ತಿದ್ದ ಅವರನ್ನು ರೈಲ್ವೇ, ಅರಣ್ಯ ನಿಗಮಗಳಿಗೆ ನಾಮನಿರ್ದೇಶನ ಮಾಡಿದ್ದು ಯಾರು ಎಂಬುದನ್ನು ಮರೆಯಬಾರದು ಎಂದು ಹೇಳಿದರು.

ಬಿಜೆಪಿ ಸುಳ್ಳು ಸರ್ವೇ ನಡೆಸಿ ಸುಳ್ಳು ಬಿಂಬಿಸಲು ಹೊರಟಿದೆ. ಜನರನ್ನು ಈ ರೀತಿ ದಿಕ್ಕು ತಪ್ಪಿಸುವುದನ್ನು ಬಿಜೆಪಿ ನಾಯಕರು ಬಿಡಬೇಕು, ಕಾಂಗ್ರೆಸ್ ಪಕ್ಷಕ್ಕೆ ಬಿಜೆಪಿ ನಾಯಕರು ಕೋಮು ಬಣ್ಣ ಹಚ್ಚುವ ಕೆಲಸ ಮಾಡುತ್ತಿರುವುದು ಖಂಡನೀಯ ಎಂದರು. ಎಲ್ಲಧರ್ಮದಜನರಆಶಯವನ್ನುಈಡೇ–ರಿಸುವ ಸಂವಿಧಾನವನ್ನು ಕಾಂಗ್ರೆಸ್ ಪಾಲನೆ ಮಾಡುತ್ತಿದೆ. ಇದನ್ನು ಬಿಜೆಪಿಯವರು ಅರ್ಥ ಮಾಡಿಕೊಳ್ಳಬೇಕು ಎಂದರು.

# ನಿರ್ಬಂಧಿತ ಪ್ರದೇಶಗಳಲ್ಲಿ ಅಕ್ರಮ ತಂಬಾಕು ಮಾರಾಟಕ್ಕೆ ಸೂಕ್ತ ಕಠಿಣ ಕ್ರಮವಹಿಸಿ

**ಹೊಸಪೇಟೆ :** ಜಿಲ್ಲಾ ವ್ಯಾಪ್ತಿಯ ಶಾಲಾ–ಕಾಲೇಜು, ಬಸ್‌ನಿಲ್ದಾಣ, ಪ್ರವಾಸಿತಾಣಗಳು ಸೇರಿ ನಿರ್ಬಂಧಿತ ಪ್ರದೇಶಗಳಲ್ಲಿ ಅಕ್ರಮ ತಂಬಾಕು ಮಾರಾಟಗಾರರ ಮೇಲೆ ಸೂಕ್ತ ಕಠಿಣ ಕ್ರಮ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿದರು.



ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಏರ್ಪಡಿಸಿದ್ದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಶುಕ್ರವಾರ ಮಾತನಾಡಿದರು,

ಜಿಲ್ಲೆಯಲ್ಲಿ ತಡೆಗಟ್ಟಬಹುದಾದ ಕಾಯಿಲೆ ಮತ್ತು ಮರಣ ಕಾರಣಗಳಲ್ಲಿ ತಂಬಾಕು ಸೇವನೆ ಪ್ರಮುಖ ಕಾರಣವಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ತಂಬಾಕು ಸೇವನೆಯಿಂದ ಮಾನವನ ದೇಹದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕಿದೆ. ತಂಬಾಕು ಸೇವನೆ ತ್ಯಜಿಸಲು ಅಗತ್ಯ ಆರೋಗ್ಯ ಚಿಕಿತ್ಸೆ ಹಾಗೂ ಆಪ್ತ ಸಮಾಲೋಚನೆ ಮೂಲಕ ತಂಬಾಕು ಸೇವನೆಯನ್ನು ತ್ಯಜಿಸುವಂತೆ ಪ್ರೇರೇಪಿಸಬೇಕು. ಯುವಕರಿಗೆ ತಂಬಾಕು ಸೇವನೆ ಸಿಗದಂತೆ ಅಂಗಡಿಗಳಲ್ಲಿ ನಿಷೇಧ ಮಾಡಬೇಕು. ತಂಬಾಕು ಮಾರಾಟ ಮಾಡುವ ಅಂಗಡಿಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳ ಯಾವುದೇ ಜಾಹೀರಾತು ಇರಬಾರದು. 18 ವರ್ಷದೊಳಗಿನ ಅಪ್ರಾಪ್ತ ವಯಸ್ಕರಿಗೆ ತಂಬಾಕು ಮಾರಾಟ ಮಾಡುವ ಯಾವುದೇ ಪುರಾವೆಗಳು ಹಳ್ಳಿಯಲ್ಲಿ ಕಂಡು ಬರಬಾರದು. 18 ವರ್ಷದೊಳಗಿನ ವ್ಯಕ್ತಿಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಿದೆ. ಉಲ್ಲಂಘಿಸಿದರೇ ಶಿಕ್ಷಾರ್ಹ ಎಂಬ ನಾಮಫಲಕವನ್ನು ಎಲ್ಲಾ ತಂಬಾಕು ಉತ್ಪನ್ನ ಮಾರಾಟ ಅಂಗಡಿಗಳಲ್ಲಿ ಅಳವಡಿಸಬೇಕು ಎಂದು ಸೂಚಿಸಿದರು.

ಈ ವೇಳೆ ಜಿಲ್ಲಾ ಆರೋಗ್ಯ ಅಧಿಕಾರಿ ಶಂಕರನಾಯ್ಕ್, ಆರ್‌ಸಿಎಚ್ ಅಧಿಕಾರಿ ಡಾ.ಜಂಬಯ್ಯ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಷಣ್ಮುಖ, ಜಿಲ್ಲಾಆರೋಗ್ಯಶಿಕ್ಷಣಾಧಿಕಾರಿ ಎಂ.ಪಿದೊಡ್ಡಮನಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

# ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರದಲ್ಲಿ ತರಬೇತಿಗೆ ಅರ್ಜಿ

**ಬಾಗಲಕೋಟೆ :** ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆತಿಥ್ಯ ಕ್ಷೇತ್ರದ ಪ್ರತಿಷ್ಠಿತ ಸಂಸ್ಥೆಗಳಾದ Food Craft Institute Mysore ಹಾಗೂ Institute of Hotel Management ಬೆಂಗಳೂರು ರವರ ಮೂಲಕ ವಸತಿಸಹಿತ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿರುತ್ತದೆ.

ಸದರಿ ಕಾರ್ಯಕ್ರಮದಡಿ Food and Beverage Services Steward '2', Multi cuisine Cook '2', ಹಾಗೂ Room Attendant 1 ಗುರಿಯನ್ನು ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ, ಹಾಗೂ Food and Beverage Services Steward '1', Multi cuisine Cook '2' ಗುರಿಯನ್ನು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನಿಗದಿಪಡಿಸಲಾಗಿದೆ. ಸದರಿ ತರಬೇತಿಗಳು ಜೂನ್ 30 ರಂದು ಈ ತರಬೇತಿ ಕಾರ್ಯಕ್ರಮಕ್ಕೆ ಕನಿಷ್ಟ ವಯಸ್ಸು 20 ರಿಂದ 45 ನಿಗದಿಪಡಿಸಲಾಗಿರುತ್ತದೆ. ತರಬೇತಿಯ ಅವಧಿಯು Food and Beverage Services Steward (ಕನಿಷ್ಟ ವಿದ್ಯಾರ್ಹತೆ 10) ಮತ್ತು Room Attendant (ಕನಿಷ್ಟ ವಿದ್ಯಾರ್ಹತೆ 5th) '4' ತಿಂಗಳು, Multi cuisine Cook '5' ತಿಂಗಳು (ಕನಿಷ್ಟ ವಿದ್ಯಾರ್ಹತೆ 8) ಆಗಿರುತ್ತದೆ.

ಈಗಾಗಲೇ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ರಾಜ್ಯದ ವಿವಿಧ ಪಂಚತಾರಾ ಹಾಗೂ ಇತರೆ ಹೋಟೆಲ್ಗಳಲ್ಲಿ ಕೆಲಸ ಖಾತರಿಯಾಗಿರುವುದು. ತರಬೇತಿಯ ವೇಳೆ ಮಾಹೆಯಾನ ರೂ. 2000/–ಗಳ ಸ್ಟೈಫಂಡ್ ಜೊತೆಗೆ ವಸತಿ,

ಊಟೋಪಚಾರ ಮತ್ತು ಯೂನಿಫಾರ್ಮ ನೀಡಲಾಗುವುದು. ತರಗತಿಯ ತರಬೇತಿ ಜೊತೆಗೆ ರಾಜ್ಯದ ವಿವಿಧ ಫೈವ ಸ್ಟಾರ್ ಹಾಗೂ ಇತರೆ ಹೋಟೆಲ್ ಗಳಲ್ಲಿ ಔಟಿ ಎಂಥ ಖಿಡಿಚುಟುಟಿಂ ಸಹ ನೀಡಲಾಗುವುದು. ಪ್ರತಿಷ್ಠಿತ ಸಂಸ್ಥೆಗಳ ಮೂಲಕ ತರಬೇತಿ ನೀಡಿ ಸರ್ಟಿಫಿಕೇಟ್ ನೀಡುವುದ–ರಿಂದ, ರಾಜ್ಯದೊಳಗೆ ಅಲ್ಲದೇ ದೇಶದ ಯಾವುದೇ ಭಾಗದ ಹೋಟೆಲ್ ಉದ್ಯಮದಲ್ಲಿ ಕೆಲಸ ಖಾತ–ರಿಯಾಗುವುದು.

ಆದ್ದರಿಂದ, ಸದರಿ ತರಬೇತಿಯನ್ನು ಪಡೆಯಲು ಆಸಕ್ತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ದಿನಾಂಕ:30.05.2025 ರಿಂದ ಕಛೇ–ರಿಯ ಅವಧಿಯಲ್ಲಿ ಉಪನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಕೊಠಡಿ ಸಂಖ್ಯೆ:137, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ ವಿಳಾಸಕ್ಕೆ ಕಛೇರಿ ಸಮಯದಲ್ಲಿ ಭೇಟಿ ನೀಡಿ ಅರ್ಜಿ ಪಡೆದು, ಜೂನ್ 10 ರೊಳಗೆ ಸಂಬಂಧಪಟ್ಟ ಮಾಹಿತಿ ಮತ್ತು ದಾಖಲೆಗಳೊಂದಿಗೆ ಅರ್ಜಿಯನ್ನು ಮರಳಿ ಕಛೇರಿಗೆ ಸಲ್ಲಿಸಬಹುದು. ಈ ತರಬೇತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ವಿಚಾರಣೆ / ಸ್ಪಷ್ಟೀಕರಣ ಕುರಿತು ದೂರವಾಣಿ ಸಂಖ್ಯೆ 08354–235709ಕ್ಕೆ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

# ಮಧ್ಯಾಹ್ನದ ಬಳಿಕ ನಡೆಯುತ್ತಿರುವ ಸಭೆಯಲ್ಲಿ ನಾನಾ ಇಲಾಖೆಗಳ ಪ್ರಗತಿ ಪರಿಶೀಲನೆ ವೇಳೆ ಸಿಎಂ ನೀಡಿದ ಸೂಚನೆಗಳು

* ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ಆದ್ಯತೆ ಮೇರೆಗೆ ಬಗೆಹರಿಸಬೇಕು. ಅರ್ಜಿಗಳನ್ನು ಕಾಟಾಚಾರಕ್ಕೆ ವಿಲೇವಾರಿ ಮಾಡದೆ ಅರ್ಜಿಗಳಿಗೆ ನ್ಯಾಯ ಒದಗಿಸಬೇಕು.

* ಕಾನೂನು ಬದ್ಧವಾಗಿ ಅರ್ಜಿಯನ್ನು ವಿಲೇವಾರಿ ಮಾಡಲು ಸಾಧ್ಯವಿಲ್ಲದಿದ್ದರೆ ಮೊದಲೇ ಅರ್ಜಿದಾರರಿಗೆ ತಿಳಿಸಬೇಕು.

*ಜಿಲ್ಲಾಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಹಾಗೂ ತಹಶೀಲ್ದಾರ್ಗಳು ತಾಲೂಕು ಮಟ್ಟದಲ್ಲಿ ಜನಸ್ಪಂದನ ಕಾರ್ಯಕ್ರಮಗಳನ್ನು ಪ್ರತಿ ತಿಂಗಳು ನಡೆಸಬೇಕು.

* ಸಕಾಲ ಯೋಜನೆಯಡಿ ಅರ್ಜಿಗಳನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಡಲು ವಿಫಲರಾಗುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು.

* ಜಲಜೀವನ ಮಿಷನ್ ಅಡಿ ಯೋಜನೆ ಕೆಲವು ಜಿಲ್ಲೆಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಅನುಷ್ಠಾನ ಆಗಿಲ್ಲ. ಅದೇ ರೀತಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು.

* ಉದ್ಯೋಗ ಖಾತ್ರಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ರೂ.1400 ಕೋಟಿ ಬಾಕಿಯಿದೆ. ಈ ಹಿನ್ನೆಲೆಯಲ್ಲಿ ಕಳೆದ ಐದು ತಿಂಗಳ ಕೂಲಿ ಹಣ ಪಾವತಿಗೆ ಬಾಕಿಯಿದೆ. ಕೇಂದ್ರದಿಂದ ಹಣ ಬಿಡುಗಡೆಗೆ ಒತ್ತಡ ಹಾಕಬೇಕು.

* ಗ್ರಾಮೀಣ ಪ್ರದೇಶದಲ್ಲಿ 1.50 ಕೋಟಿ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲಾಗಿದೆ. ಗ್ರಾಮ ಪಂಚಾಯತ್ ಮಟ್ಟದಲ್ಲಿ ಬಾಕಿಯಿರುವ 1352 ಇ–ಸ್ವತ್ತು ಅರ್ಜಿಗಳನ್ನು ನಿಗದಿತ ಅವಧಿಯ ಒಳಗಾಗಿ ವಿಲೇವಾರಿ ಮಾಡಬೇಕು.

* ಹೊಸದಾಗಿ ಘೋಷಣೆ ಮಾಡಲಾಗಿರುವ 186 ಇಂದಿರಾ ಕ್ಯಾಂಟೀನ್ಗಳ ಪೈಕಿ ಕೇವಲ 103 ನಿರ್ಮಾಣ ಕಾರ್ಯ ಪೂರ್ಣಗೊಂಡಿವೆ. ಆಹಾರವಿತರಣೆ 43 ಇಂದಿರಾಕ್ಯಾಂಟೀನ್ಗಳಲ್ಲಿ ಮಾತ್ರ ಪ್ರಾರಂಭವಾಗಿದೆ. ಒಂದು ವಾರದ ಒಳಗಾಗಿ ಇನ್ನುಳಿದ ಎಲ್ಲಾ ಕಡೆ ಆಹಾರ ವಿತರಣೆ ಪ್ರಾರಂಭಿಸಲು ಜಿಲ್ಲಾಧಿಕಾರಿಗಳು ಕ್ರಮಕೈಗೊಳ್ಳಬೇಕು. ಇನ್ನೂ 5 ಕಡೆ ಇಂದಿರಾ ಕ್ಯಾಂಟೀನ್ಗಳಿಗೆ ಸ್ಥಳ ಗುರುತಿಸಬೇಕಾಗಿದೆ. ತಕ್ಷಣ ನಿವೇಶನ ಗುರುತಿಸಬೇಕು.

* ನಗರಾಭಿವೃದ್ಧಿ ಇಲಾಖೆಯಡಿ ಒಟ್ಟು 46,85,107 ಎ–ಖಾತಾ ಸ್ವತ್ತುಗಳನ್ನು ಗುರುತಿಸಲಾಗಿದ್ದು, 21,18,459 ಸ್ವತ್ತುಗಳಿಗೆ ಇ–ಖಾತಾ ನೀಡಲಾಗಿದೆ. 9,93,342 ಅನಧಿಕೃತ ಬಿ–ಖಾತಾ ಸ್ವತ್ತುಗಳನ್ನು ಗುರುತಿಸಲಾಗಿದ್ದು, ಇದುವರೆಗೆ 2,21,691 ಬಿ–ಖಾತಾ ನೀಡಲಾಗಿದೆ. ಎಲ್ಲಾ ಸ್ವತ್ತುಗಳಿಗೆ ನಿಯಮಾನುಸಾರ ಖಾತಾ ಒದಗಿಸಿ ತೆರಿಗೆ ವ್ಯಾಪ್ತಿಗೆ ಬರಲು ಕ್ರಮ ಕೈಗೊಳ್ಳಬೇಕು.

* ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಡೆಂಗ್ಯು ಪ್ರಮಾಣ ನಿಯಂತ್ರಣದಲ್ಲಿದೆ. ಆದರೂ ಡೆಂಗ್ಯು ನಿಯಂತ್ರಣ–ಕ್ಕೆ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕು. ಕೊರೊನಾ ಬಗ್ಗೆ ಯಾವುದೇ ಆತಂಕ ಅಗತ್ಯವಿಲ್ಲ. ಆದರೆ ಎಚ್ಚರಿಕೆ ಅಗತ್ಯ.

* ಎಲ್ಲಾ ತಾಲೂಕುಗಳಲ್ಲಿ ಡಯಾಲಿಸಿಸ್ ಯುನಿಟ್ ಪ್ರಾರಂಭಿಸಲು ಈಗಾಗಲೇ ಆದೇಶ ನೀಡಲಾಗಿದೆ. ಇವು ಪ್ರಾರಂಭವಾಗಿದೆಯೇ*ಪ್ರಾರಂಭವಾಗಿದ್ದರೆ ಕಾರ್ಯನಿರ್ವಹಿಸುತ್ತಿವೆಯೇ

*ಜನಸಾಮಾನ್ಯರಿಗೆ ಆರೋಗ್ಯ ಸೇವೆಯನ್ನು ಖಾತ್ರಿಪಡಿಸುವುದು ಜಿಲ್ಲಾಧಿಕಾರಿ ಹಾಗೂ ಸಿಇಓಗಳ ಜವಾಬ್ದಾರಿಯಾಗಿದೆ.

ಜಿಲ್ಲಾಸ್ಪತ್ರೆ, ತಾಲೂಕಾಸ್ಪತ್ರೆಗಳಿಗೆ ನೀವು ನಿರಂತರವಾಗಿ ಭೇಟಿ ನೀಡಬೇಕು. ಜಿಲ್ಲಾ ಮಟ್ಟದಲ್ಲಿ ವೈದ್ಯಾಧಿಕಾರಿಗಳನ್ನು ಅನಗತ್ಯವಾಗಿ ಸಭೆಗಳಿಗೆ ಆಹ್ವಾನಿಸಬಾರದು.

*ಬಾಣಂತಿಯರ ಮರಣ ಪ್ರಮಾಣ ಕೇರಳಕ್ಕೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಹೆಚ್ಚಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಶೇ.30 ರಷ್ಟು ಕಡಿಮೆಯಾಗಿದ್ದರೂ, ಇದನ್ನು ಇನ್ನಷ್ಟು ಕಡಿಮೆಗೊಳಿಸಲು ಸಾಂಸ್ಥಿಕ ಹೆರಿಗೆಯನ್ನು ಹೆಚ್ಚಿಸುವುದು, ಅಗತ್ಯ ಉಪಕರಣಗಳ ಖರೀದಿ ಸೇರಿದಂತೆ ಎಲ್ಲಾ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು.

*ಸ್ಮಶಾನ ಮತ್ತು ಕಬರಸ್ತಾನಗಳಿಗೆ ಜಮೀನು ಒದಗಿಸಲು ಆದ್ಯತೆ ನೀಡಬೇಕು. ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆ ಖಾಸಗಿ ಜಮೀನು ಖರೀದಿ ಮಾಡಿ ಒದಗಿಸಬೇಕು.

ಹಾಸ್ಟೆಲ್ಗಳಿಗೆ ನಿವೇಶನ ಗುರುತಿಸುವ ಸಂದರ್ಭದಲ್ಲಿ ಊರಿನಿಂದ ಬಹಳ ದೂರವಿರುವ ನಿರ್ಜನ ಪ್ರದೇಶದಲ್ಲಿ ನೀಡಬಾರದು. ನಿವೃತ್ತ ಸೈನಿಕರಿಗೆ ನಿವೇಶನ ಕುರಿತಾದ ಅರ್ಜಿಗಳನ್ನು ಆದ–ಷ್ಟು ಬೇಗನೆ ವಿಲೇವಾರಿ ಮಾಡಿ ಅವ–ರಿಗೆ ಜಮೀನು ಒದಗಿಸಬೇಕು. ಪ್ರತಿ ತಾಲೂಕಿನಲ್ಲಿ ಲಭ್ಯವಿರುವ ಸರ್ಕಾರಿ ಜಮೀನಿನ ಸಂಪೂರ್ಣ ಮಾಹಿತಿ ಲಭ್ಯವಿದ್ದು, ಒತ್ತುವರಿಯಾಗಿದ್ದರೆ ಅದನ್ನು ತಕ್ಷಣ ತೆರವುಗೊಳಿಸಬೇಕು. ಮುಂದಿನ ಸಭೆಯ ವೇಳೆ ನಿವೇಶನ ಲಭ್ಯವಿಲ್ಲದ ಬಗ್ಗೆ ಯಾವುದೇ ದೂರು ಬರಬಾರದು.

* ಸೈನಿಕರ ಕಲ್ಯಾಣ ನಿಗಮ ಸ್ಥಾಪಿಸುವ ಕುರಿತಾದ ಪ್ರಸ್ತಾವನೆಯನ್ನು ಮುಂದಿನ ಸಚಿವ ಸಂಪುಟದಲ್ಲಿ ಮಂಡಿಸುವಂತೆ ಮುಖ್ಯಮಂತ್ರಿ ಅವರು ಸೂಚನೆ ನೀಡಿದರು.

*ಒಟ್ಟು 59 ತಾಲೂಕುಗಳಲ್ಲಿ ಕ್ರೀಡಾಂಗಣಗಳು ಲಭ್ಯವಿಲ್ಲ. ಎಲ್ಲಾ ತಾಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಜಮೀನು ಗುರುತಿಸಿ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಸೂಚನೆ ನೀಡಿದರು.

* ಯುವನಿಧಿ ಯೋಜನೆಯಡಿ ಪ್ರತಿ ಫಲಾನುಭವಿಗೆ ಎರಡು ವರ್ಷಗಳ ಅವಧಿಗೆ ನೆರವು ನೀಡಲಾಗುತ್ತಿದ್ದು, ಈ ಅವಧಿಯಲ್ಲಿ ಫಲಾನುಭವಿಗಳಿಗೆ ಉದ್ಯೋಗ ದೊರೆತರೆ ಅಥವಾ ಉನ್ನತ ಶಿಕ್ಷಣಕ್ಕೆ ತೆರಳಿದರೆ ನೆರವು ಸ್ಥಗಿತಗೊಳ್ಳುತ್ತದೆ. ಪ್ರತಿ ಫಲಾನುಭವಿಗಳಿಗೆ ಕೌಶಲ್ಯ ತರಬೇತಿ ನೀಡಿ ಅವರ ಬೆಳವಣಿಗೆ ಮೇಲೆ ನಿಗಾ ವಹಿಸಬೇಕು.

# ಕಲಬುರಗಿ ಜಿಲ್ಲಾಧಿಕಾರಿ ಅವಹೇಳನ: ರವಿಕುಮಾರ್ ಗೆ ಹೈಕೋರ್ಟ್ ತರಾಟೆ; ಕ್ಷಮೆಯಾಚಿಸುವಂತೆ ತಾಕೀತು

**ಬೆಂಗಳೂರು:** ಕಲಬುರಗಿ ಜಿಲ್ಲಾಧಿಕಾರಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ವಿಧಾನ ಪರಿಷತ್ ವಿರೋಧಪಕ್ಷದಮುಖ್ಯಸಚೇತಕಎನ್.ರವಿಕುಮಾರ್ ಅವರನ್ನು ಕರ್ನಾಟಕ ಹೈಕೋರ್ಟ್ ಗುರುವಾರ ತೀವ್ರ ತರಾಟೆಗೆ ತೆಗೆದುಕೊಂಡಿದ್ದು, ಕ್ಷಮೆಯಾಚಿಸುವಂತೆ ತಾಕೀತು ಮಾಡಿದೆ.

ತಮ್ಮವಿರುದ್ಧದಾಖಲಾಗಿದ್ದಎಫ್‌ಐಆರ್‌ರದ್ದುಕೋರಿ ರವಿಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಕಲಬುರಗಿ ಜಿಲ್ಲಾಧಿಕಾರಿ ಫೌ–ಜಿಯಾ ತರನ್ನುಮ್ ಅವರ ವಿರುದ್ಧ ನೀಡಿದ ಹೇಳಿಕೆಗೆ ನೇರವಾಗಿ ಕ್ಷಮೆಯಾಚಿಸುವಂತೆ ಸೂಚಿಸಿದೆ.

ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರನ್ನೊಳಗೊಂಡ ರಜಾಕಾಲದ ಏಕಸದಸ್ಯ ಪೀಠ, ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ಪೊಲೀಸರಿಗೆ ಸೂಚನೆ ನೀಡಿದೆ. ಅಲ್ಲದೇ ವಿಚಾರಣೆಗೆ ಸಹಕರಿಸಯವಂತೆ ರವಿಕುಮಾರ್ ಅವರಿಗೂ ಕೋರ್ಟ್ ಸೂಚಿಸಿದೆ.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿಎನ್ ಜಗದೀಶ್ ಅವರು, ಆರೋಪಿಯು ತನಿಖೆಗೆ ಸಹಕರಿಸುವುದಾದರೆ ಬಂಧಿಸುವುದಿಲ್ಲ ಎಂದು ಭರವಸೆ ನೀಡಿದರು.

"ಇವುಗಳು ನೀಡಬೇಕಾದ ಹೇಳಿಕೆಗಳಲ್ಲ" ಎಂದು ವಿಚಾರಣೆಯ ಸಮಯದಲ್ಲಿ ನ್ಯಾಯಾಧೀಶರು ಹೇಳಿದರು. ಮಧ್ಯಪ್ರದೇಶದ ಹಾಲಿ ಸಚಿವರೊಬ್ಬರು ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ ಇತ್ತೀಚಿನ ಸುಪ್ರೀಂ ಕೋರ್ಟ್ ಪ್ರಕರಣಕ್ಕೆ ಹೋಲುವ ರೀತಿಯಲ್ಲಿ ಈ ಪ್ರಕರಣ ಇದೆ. "ನೀವು ಭಿನ್ನವಾಗಿಲ್ಲ. ನೀವು ಅಂತಹ ಹೇಳಿಕೆಗಳನ್ನು ನೀಡುವಂತಿಲ್ಲ" ಎಂದು ಕೋರ್ಟ್ ಎಚ್ಚರಿಸಿದೆ. ಒಂದು ವೇಳೆ ಆರೋಪಿಯುವ ಕ್ಷಮೆ ಕೇಳುವುದಾದರೆ ಅದನ್ನು ಪ್ರಮಾಣಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿ ಎಂದು ರವಿಕುಮಾರ್ ಪರ ವಕೀಲರಿಗೆ ಹೈಕೋರ್ಟ್ ಸೂಚಿಸಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618